ಜೆ. ಎಸ್. ಖಂಡೇರಾವ್
J. S. KHANDERAO

ಕುಪ್ಪಣ್ಣ ಕಂದಗಲ್
Kuppanna Kandagal



ಕರ್ನಾಟಕ ಲಲಿತಕಲಾ ಅಕಾಡೆಮಿ
Karnataka Lalithakala Academy

ಜೆ.ಎಸ್. ಖಂಡೇರಾವ್
J.S. Khanderao

ಕುಪ್ಪಣ್ಣ ಕಂದಗಲ್

Kuppanna Kandagal

ಕರ್ನಾಟಕ ಲಲಿತಕಲಾ ಅಕಾಡೆಮಿ

೧೪/೩, ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೧

Karnataka Lalithakala Academy

14/3, Nrupatunga Road, Bangalore - 560 001

J.S. KHANDERAO *a Biography by* ***Sri. Kuppanna Kandagal***
Published by ***H. Shankarappa,*** *Registrar, Karnataka Lalithakala Academy*
Nrupathunga Road, Bangalore - 560 001

Pages : VI+36

First Impression : 1999

Price : Rs. 35/-

ಪ್ರಧಾನ ಸಂಪಾದಕರು
ಪ್ರೊ|| ಅಂದಾನಿ ಏ.ಜಿ.

ಪ್ರಕಟಣಾ ಸಮಿತಿ
ಶ್ರೀ ಚಿ.ಸು. ಕೃಷ್ಣಸೆಟ್ಟಿ
ಶ್ರೀ ಆರ್.ಜಿ. ರಾಯ್ಕರ್
ಶ್ರೀ ರಾಜೇಂದ್ರ ಅಷ್ಟಗಿ
ಶ್ರೀ ಅಶೋಕ ಟಿ. ಅಕ್ಕಿ
ಶ್ರೀಮತಿ ಭಾನು ಮುನಾಫ

ಪ್ರಕಾಶಕರು
ಶ್ರೀ ಎಚ್. ಶಂಕರಪ್ಪ

Translated by
SHRIDHAR RAO

Layout Design & Print by
MAYUR PRINT-ADS
Cottonpet Main Road, Bangalore - 560 053. Tele/Fax : 670 0203

Cover Photo : 'ವಿಂಡೊ ಶ್ರೇಣಿ' ಮಾಧ್ಯಮ: ತೈಲವರ್ಣ "Window Series" Medium: Oil Colour

ಅಧ್ಯಕ್ಷರ ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯು ಕಲೆ ಮತ್ತು ಕಲಾವಿದರ ಸರ್ವತೋಮುಖ ಪ್ರಗತಿಗಾಗಿ ಹಲವಾರು ಪ್ರಮುಖ ಯೋಜನೆಗಳನ್ನು ರೂಪಿಸಿದೆ. ಇವುಗಳಲ್ಲಿ ಪುಸ್ತಕ ಪ್ರಕಟಣೆಯೂ ಒಂದು ಗಮನಾರ್ಹ ಕಾರ್ಯಕ್ರಮ. ಅಕಾಡೆಮಿಯು ಈವರೆಗೆ ಅನೇಕ ಹಿರಿಯ ಹಾಗೂ ಸಮಕಾಲೀನ ಕಲಾವಿದರ ಬಗ್ಗೆ ಪುಸ್ತಕಗಳನ್ನು ಹೊರತಂದಿದೆ. ಈ ಪುಸ್ತಕಗಳು ಕಲಾವಿದರ ಮತ್ತು ಅವರ ಕಲೆಯ ಪರಿಚಯ ಮಾಡಿಸುವುದರ ಜೊತೆಗೆ, ಕಲಾಕ್ಷೇತ್ರದ ಬೆಳವಣಿಗೆಯ ಬಗೆಗೂ ತಿಳಿಯಲು ಸಹಾಯ ಮಾಡಬಲ್ಲವು.

ಸಮಕಾಲೀನ ಕಲಾವಿದರ ಮಾಲೆಯಲ್ಲಿ ಈಗ ಶ್ರೀ ಜೆ.ಎಸ್. ಖಂಡೇರಾವ ಅವರ ಬಗೆಗಿನ ಈ ಪುಸ್ತಕವನ್ನು ಹೊರತರಲು ನನಗೆ ಅತೀವ ಸಂತಸ ಮತ್ತು ಹೆಮ್ಮೆ ಎನಿಸುತ್ತದೆ. ನನ್ನ ಕಲಾಗುರುಗಳಾದ ಖಂಡೇರಾವರ ಬಗೆಗಿನ ಈ ಕೃತಿ ನನ್ನ ಅಧ್ಯಕ್ಷತೆಯ ಅವಧಿಯಲ್ಲೇ ಪ್ರಕಟಗೊಳ್ಳುತ್ತಿರುವುದು ನನ್ನ ಸೌಭಾಗ್ಯವೆಂದೇ ಭಾವಿಸುತ್ತೇನೆ.

ಕಲಬುರ್ಗಿ ವಿಭಾಗದಲ್ಲಿ, ಕಲಾಕ್ಷೇತ್ರ ನಿರುತ್ಸಾಹ ಸ್ಥಿತಿಯನ್ನು ತಲುಪಿ, ಕಲಾ ಚಟುವಟಿಕೆಗಳು ಸ್ತಬ್ಧವಾಗಿದ್ದ ಸಂದರ್ಭದಲ್ಲಿ ಕಲಬುರ್ಗಿಯಲ್ಲೊಂದು ಕಲಾ ಶಾಲೆಯನ್ನು ೬೦ರ ದಶಕದಲ್ಲಿ ಸ್ಥಾಪಿಸಿ, ಅನೇಕ ಕಲಾವಿದರನ್ನು ರೂಪಿಸಿ ಈ ಪ್ರದೇಶದ ಕಲಾ ಪರಂಪರೆಯನ್ನು ಮುಂದುವರೆಸಿಕೊಂಡು ಬಂದ ಖ್ಯಾತಿ ಇವರದು.


ತಮ್ಮ ಅಧ್ಯಾಪಕ ವೃತ್ತಿ ಮತ್ತು ಕಲಾ ಚಟುವಟಿಕೆಗಳ ಉನ್ನತ ಹುದ್ದೆಗಳ ನಿರ್ವಹಣೆಯ ನಡುವೆಯು ನಿರಂತರ ಕ್ರಿಯಾಶೀಲರಾಗಿ ಕಲಾಸಾಧನೆಯನ್ನು ಮುನ್ನಡೆಸಿಕೊಂಡು ಬಂದು, ಇಂದು ಸಮಕಾಲೀನ ಪ್ರಮುಖ ಕಲಾವಿದರಲ್ಲೊಬ್ಬರಾಗಿ ಗುರ್ತಿಸಲ್ಪಟ್ಟಿದ್ದಾರೆ. ನಿಸರ್ಗ ಮತ್ತು ಭಾವಚಿತ್ರ ರಚನೆಯಲ್ಲಿ ತಮ್ಮತನವನ್ನು ಸ್ಥಾಪಿಸಿ ಅನೇಕ ನವ್ಯಶೈಲಿಯ ಸರಣಿಗಳನ್ನು ರಚಿಸಿ ತಾವು ಆಯ್ದುಕೊಂಡ ಮಾಧ್ಯಮದಲ್ಲಿ ಪೂರ್ಣ ಪ್ರಭುತ್ವ ಗಳಿಸಿರುತ್ತಾರೆ.

ಸ್ವತಃ ಕಲಾವಿದರಾದ ಶ್ರೀ ಕುಪ್ಪಣ್ಣ ಕಂದಗಲ್‌ರವರು ಕಲಾವಿದರ ಜೀವನ, ಚಿಂತನೆ, ಅವರ ಬದುಕಿನ ಮೌಲ್ಯಗಳನ್ನೆಲ್ಲಾ ಸೂಕ್ಷ್ಮವಾಗಿ ಅರಿತುಕೊಂಡು, ಕಲಾವಿದರ ಜೊತೆಗೆ ಆಳವಾಗಿ ಚರ್ಚಿಸಿ ಈ ಕೃತಿಯನ್ನು ಬರೆದುಕೊಟ್ಟಿರುವರು. ಅವರಿಗೂ ಹಾಗೂ ಆಂಗ್ಲಭಾಷೆಗೆ ಭಾಷಾಂತರಿಸಿದ ಶ್ರೀ ಶ್ರೀಧರರಾವ್ ಅವರಿಗೂ ನಾನು ಅಕಾಡೆಮಿಯ ಪರವಾಗಿ ಮತ್ತು ವೈಯಕ್ತಿಕವಾಗಿ ವಂದಿಸುತ್ತೇನೆ.

ಮುದ್ರಣದ ಮೇಲ್ವಿಚಾರಣೆಯನ್ನು ನೋಡಿಕೊಂಡು ಮುದ್ರಣದ ಕರಡನ್ನು ತಿದ್ದಿದ ಅಕಾಡೆಮಿಯ ಸದಸ್ಯರಾದ ಡಾ|| ಹೆಚ್. ಚಂದ್ರಶೇಖರ ಅವರಿಗೆ ಧನ್ಯವಾದಗಳು. ಈ ಪುಸ್ತಕ ಸುಂದರವಾಗಿ ಮುದ್ರಿಸಿದ ಮಯೂರ ಪ್ರಿಂಟ್ ಆ್ಯಡ್ಸ್ ಅವರಿಗೂ ಧನ್ಯವಾದಗಳು.

ಎಂದಿನಂತೆ ಕಲಾರಸಿಕರು ಈ ಪುಸ್ತಕವನ್ನು ತಮ್ಮದಾಗಿಸಿಕೊಳ್ಳುತ್ತಾರೆಂದು ಆಶಿಸುವೆ.

ಅಂದಾನಿ ವಿ.ಜಿ.
ಅಧ್ಯಕ್ಷರು



ಜೆ.ಎಸ್. ಖಂಡೇರಾವ್

J.S. Khanderao

ಜೆ. ಎಸ್. ಖಂಡೇರಾವ್

ಕರ್ನಾಟಕದ ಕಲಬುರ್ಗಿ ವಿಭಾಗ ಸಾಂಸ್ಕೃತಿಕವಾಗಿ ಸಂಪದ್ಭರಿತ ಪ್ರದೇಶ. ಈ ನಾಡಿಗೆ ಭವ್ಯವಾದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆ ಇದೆ. ಪ್ರತಿಭಾವಂತ ಕಲಾವಿದರು, ಕವಿಗಳು ಮತ್ತು ಸಾಹಿತಿಗಳಿಗೆ ಜನ್ಮ ನೀಡಿದ ಕೀರ್ತಿ ಈ ಭಾಗದ್ದು. ಆಯಾ ಕಾಲದ ಕಲೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಮತ್ತು ಬದಲಾವಣೆಗೆ ಇಲ್ಲಿನ ಅನೇಕ ಕಲಾವಿದರು, ಸಾಹಿತಿಗಳು ತಮ್ಮ ಕಾಣಿಕೆ ಸಲ್ಲಿಸುತ್ತಾ ಬಂದಿದ್ದಾರೆ. ಈ ಹೈದ್ರಾಬಾದ್ ಕರ್ನಾಟಕ ಪ್ರದೇಶ ಸಾಂಸ್ಕೃತಿಕವಾಗಿ ಹಿದುಳಿದ ಪ್ರದೇಶವೆಂದು ಪರಿಗಣಿಸಲ್ಪಟ್ಟಿದ್ದರೂ, ತಮ್ಮ ಅಗಾಧ ಪ್ರತಿಭೆ ಮತ್ತು ಸಾಧನೆಯಿಂದ ಚಿತ್ರಕಲಾ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಅನೇಕ ಕಲಾವಿದರು ಇಲ್ಲಿ ಆಗಿಹೋಗಿದ್ದಾರೆ. ಸುರಪುರದ ಗರುಡಾದ್ರಿಯಿಂದ ಮೊದಲುಗೊಂಡು ಶಾಂತಲಿಂಗಪ್ಪಾ ಪಾಟೀಲ್, ಶಂಕರರಾವ್ ಆಳಂದಕರ್, ಎಂ.ಡಿ. ಭೋಪಲೆ, ಬೆಟ್ಟದೂರ ಶಂಕರಗೌಡ, ಎಸ್.ಎಂ. ಪಂಡಿತ, ಕು. ಚಂದ್ರಶೇಖರನ್ನೊಳಗೊಂಡು ಇಂದಿನ ತರುಣ ಕಲಾವಿದರವರೆಗೆ ಅನೇಕರು ತಮ್ಮ ಪ್ರತಿಭೆಯಿಂದ ಈ ಪ್ರದೇಶಕ್ಕೆ ಕೀರ್ತಿ ತಂದಿರುವರು. ಈ ಹೊಸ ತಲೆಮಾರಿನ ಕಲಾವಿದರಲ್ಲಿ ಶ್ರೀ ಜೆ.ಎಸ್. ಖಂಡೇರಾವ್‌ರವರು ಪ್ರಮುಖರು.

ಮಾನವೀಯತೆಯೇ ಮೂರ್ತಿವೆತ್ತಂತಿರುವ ಶ್ರೀ ಖಂಡೇರಾವರವರು ಸರಳತೆ ಮತ್ತು ಸೌಜನ್ಯಕ್ಕೆ ಹೆಸರಾದವರು. ಅತಿ ಸಾಮಾನ್ಯರಂತೆ ಕಾಣುವ ಸೌಮ್ಯ ಸ್ವಭಾವದ ಇವರಲ್ಲಿ ಅಗಾಧವಾದ ಕಲಾ ಪ್ರತಿಭೆ ಇರುವುದು ಮೇಲ್ನೋಟಕ್ಕೆ ಯಾರಿಗೂ ಕಂಡುಬರುವುದಿಲ್ಲ. ಅಸಾಧರಣ ಕಲಾ ಸಾಮರ್ಥ್ಯ ಹೊಂದಿದ ಇವರು ಕೀರ್ತಿ ಮತ್ತು ಸ್ಥಾನಮಾನಗಳನ್ನು ಅರಸಿ ಹೋದವರಲ್ಲವಾದರೂ, ಕಲಾ ಕ್ಷೇತ್ರದಲ್ಲಿ ಅವರ ಹೆಸರು ಉನ್ನತ ಶ್ರೇಣಿಯಲ್ಲಿದೆ.

ಕಲಬುರ್ಗಿ ಇವರ ಹುಟ್ಟೂರು. ಇವರ ಹೆಸರು ಜಗದೇವಪ್ಪ. ತಂದೆ ಶಂಕರಪ್ಪ ಮತ್ತು ತಾಯಿ ಬಸ್ಸಮ್ಮ. ಮನೆತನದ ಅಡ್ಡ ಹೆಸರು ಖಂಡೇರಾವ್. ಗೋಣಿಚೀಲ ಮತ್ತು ಉಪ್ಪನ್ನು ಮಾರುವುದು ಇವರ ಮನೆತನದ ಕಸುಬಾಗಿದ್ದಿತು. ದಿನಾಂಕ : ೦೧-೧೧-೧೯೪೦ರಂದು ಹುಟ್ಟಿದ ಇವರಿಗೆ ನಾಲ್ಕು ಜನ ಅಕ್ಕಂದಿರು. ಜನ್ಮತಾಳಿದ ಎರಡನೇ ದಿವಸಕ್ಕೆ ತಾಯಿಯನ್ನು ಕಳೆದುಕೂಂಡು ತಬ್ಬಲಿಗಳಾದರು. ತಮ್ಮ ಸೋದರತ್ತೆಯ ಆರೈಕೆಯಲ್ಲಿ ಸ್ವಲ್ಪ ದಿನ ಕಳೆದ ಇವರು ಮುಂದೆ ತಮ್ಮ ಎರಡನೇ ತಾಯಿಯಾಗಿ ಬಂದ ಶ್ರೀಮತಿ ಶಿವಮ್ಮನ ಆಶ್ರಯದಲ್ಲಿ ಬೆಳೆದರು. ಎರಡನೇ ತಾಯಿಯವರಿಂದ ಆರು ಜನ ಸಹೋದರರನ್ನು ಮತ್ತು ಇಬ್ಬರು ಸಹೋದರಿಯರನ್ನು ಪಡೆದ ಇವರದು ತುಂಬು ಕುಟುಂಬ. ಕುಟುಂಬದ ಇತರ ಮಕ್ಕಳಿಗೆ ಹೋಲಿಸಿದರೆ ಬಾಲಕ ಜಗದೇವಪ್ಪನವರ ಆಸಕ್ತಿಗಳೇ ಭಿನ್ನವಾಗಿದ್ದವು. ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ಇವರು ಕಲಾಸಕ್ತಿಯನ್ನು ಹೊಂದಿದವರಾಗಿದ್ದರು. ಇವರ ಪ್ರಾಥಮಿಕ ಶಿಕ್ಷಣ ಕಲಬುರ್ಗಿಯ "ಆಸಿಫಗಂಜ" ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಆರಂಭವಾಯಿತು. ಆ ಶಾಲೆಯ ಶಿಕ್ಷಕರಾದ ಶಂಕರರಾವ್‌ರವರು ವಿದ್ಯಾರ್ಥಿ ಜಗದೇವಪ್ಪನವರ ಕಲಾಸಕ್ತಿಯನ್ನು ಗುರುತಿಸಿದ ಪ್ರಥಮ ವ್ಯಕ್ತಿ. ತಮ್ಮ ವಿದ್ಯಾಭ್ಯಾಸದ ಜೊತೆಗೆ ಬಣ್ಣದ ನಕಾಶೆಗಳನ್ನು ತಯಾರಿಸುವುದು, ಚಾರ್ಟ್‌ಗಳನ್ನು ತಯಾರುಮಾಡುವುದು ಇವರ ಹವ್ಯಾಸವಾಗಿತ್ತು. ಮುಂದೆ ಮಾಧ್ಯಮಿಕ ಶಾಲೆಯಲ್ಲಿ ಶಿಕ್ಷಕರಾದ ಮಹ್ಮದ ಶರೀಫ್ ಮತ್ತು ವಿ.ಎಸ್. ಭಂಕೂರಕರರವರಿಂದ ಹೆಚ್ಚಿನ

ಪ್ರೋತ್ಸಾಹ ದೊರೆಯಿತು. ಆಗಿನ ಕಾಲದಲ್ಲಿ ಚಿತ್ರಕಲೆಗೆ ಸಂಬಂಧಪಟ್ಟ ಪರೀಕ್ಷೆಗಳು ಸಾಮಾನ್ಯವಾಗಿ ಹೈದ್ರಾಬಾದ್ ಮತ್ತು ಸೊಲ್ಲಾಪೂರಗಳಲ್ಲಿ ನಡೆಯುತ್ತಿದ್ದವು. ಇವರ ಕಲಾಸಕ್ತಿಯ ಬಗ್ಗೆ ನಿರ್ಲಕ್ಷ್ಯ ಧೋರಣೆ ಹೊಂದಿದ್ದ ಇವರ ತಂದೆಯವರಿಗೆ ಮಗನಿಗೆ ಸಂಬಂಧಿಸಿದ ಯಾವುದರ ಬಗ್ಗೆಯೂ ಗಮನಕೊಡುವ ವ್ಯವಧಾನವಿರಲಿಲ್ಲ. ಶಿಕ್ಷಕರಾದ ಮಹ್ಮದ್ ಶರೀಫ್‌ರವರೇ ಇವರ ತಂದೆಯವರನ್ನು ಸ್ವತಃ ಕಂಡು ತಮ್ಮ ವಿದ್ಯಾರ್ಥಿಯ ಕಲಾಭಿರುಚಿಯ ಬಗ್ಗೆ ವಿವರಿಸಿ, ಅವರ ಪ್ರಯತ್ನಕ್ಕೆ ಸಹಾಯ ಹಸ್ತ ನೀಡಲು ವಿನಂತಿಸಿಕೊಂಡರು. ಅವರ ಪ್ರಯತ್ನದ ಫಲವಾಗಿ ಖಂಡೇರಾವ್‌ರವರು ಆರನೇ ತರಗತಿಯಲ್ಲಿ ಕಲಿಯುತ್ತಿರುವಾಗ ಹೈದ್ರಾಬಾದಿನಲ್ಲಿ ನಡೆದ ಲೋವರ್ ಡ್ರಾಯಿಂಗ್ ಪರೀಕ್ಷೆಗೆ ಕುಳಿತು ಉತ್ತೀರ್ಣರಾದರು. ಮುಂದೆ ಎಂಟನೇ ತರಗತಿಯಲ್ಲಿ ಅಭ್ಯಸಿಸುತ್ತಿರುವಾಗ ಸೋಲಾಪುರಕ್ಕೆ ಹೋಗಿ ಇಂಟರ್‌ಮೀಡಿಯಟ್ ಗ್ರೇಡ್ ಪರೀಕ್ಷೆಗೆ ಕುಳಿತು ಪಾಸಾದರು. ಇವರ ಪ್ರೌಢ ಶಿಕ್ಷಣ ಕಲಬುರ್ಗಿಯ ಸರಕಾರಿ ಪ್ರೌಢಶಾಲೆಯಲ್ಲಿ ಮುಂದುವರೆಯಿತು. ಅಲ್ಲಿ ಸೈಯದ್ ಹುಸೇನರೆಂಬ ಕಲಾ ಶಿಕ್ಷಕರು ಇವರಿಗೆ ಮಾರ್ಗದರ್ಶಕರಾಗಿ ದೊರೆತರು. ಆಗ ಅವರು ಪ್ರತಿಭಾವಂತ ಡ್ರಾಯಿಂಗ್ ಮಾಸ್ಟರ್‌ರೆಂದು ಪರಿಗಣಿಸಲ್ಪಡುತ್ತಿದ್ದರು. ಜೊತೆಗೆಯೇ ಭಂಕೂರಕರ್ ಮಾಸ್ಟರರ ಮಾರ್ಗದರ್ಶನದಲ್ಲಿ ಕಲಾಭ್ಯಾಸವನ್ನು ಮುಂದುವರೆಸಿದರು. ಆಗ ನೂತನ ವಿದ್ಯಾಲಯ ಶಾಲೆಯಲ್ಲಿ ಶ್ರೀ ಎಸ್.ಎಂ. ಪಂಡಿತರ ಮತ್ತು ಇತರೆ ಸಮಕಾಲೀನ ಖ್ಯಾತ ಕಲಾವಿದರ ಚಿತ್ರಕೃತಿಗಳು ಇವರಿಗೆ ನೋಡಲಿಕ್ಕೆ ಲಭ್ಯವಿದ್ದವು. ಆ ಕಲಾಕೃತಿಗಳ ಅಧ್ಯಯನವನ್ನು ಮಾಡುತ್ತ ಅವುಗಳಿಂದ ಪ್ರಭಾವಿತರಾದರು. ಒಂಭತ್ತನೇ ತರಗತಿಯಲ್ಲಿ ಕಲಿಯುತ್ತಿರುವಾಗ ಕಲಬುರ್ಗಿಯ ಇತರ ಹತ್ತು ಜನ ವಿದ್ಯಾರ್ಥಿಗಳೊಡನೆ ಮುಂಬಯಿಗೆ ಹೋಗಿ ಎಲಿಮೆಂಟರಿ ಪೇಂಟಿಂಗ್ ಡ್ರಾಯಿಂಗ್ ಪರೀಕ್ಷೆ ಕೊಟ್ಟು ಬಂದರು. ಆ ಹನ್ನೊಂದು ವಿದ್ಯಾರ್ಥಿಗಳಲ್ಲಿ ಉತ್ತೀರ್ಣರಾದವರು ಖಂಡೇರಾವ್‌ರವರು ಒಬ್ಬರೇ ಆಗಿದ್ದದ್ದು ಎಲ್ಲರಿಗೂ ಅತಿ ಆಶ್ಚರ್ಯವನ್ನು ಉಂಟುಮಾಡಿತು. ಈ ಯಶಸ್ಸಿನಿಂದ ಇವರ ಉತ್ಸಾಹ ಗರಿಗೆದರಿತು, ಮನೋಬಲ ಹೆಚ್ಚಿತು. ಈ ಆತ್ಮಸ್ಥೈರ್ಯ, ಮುಂಬಯಿಯ ಜೆ. ಜೆ. ಕಲಾಶಾಲೆಯಲ್ಲಿ ವ್ಯಾಸಂಗ ಮಾಡಬೇಕೆಂಬ ಇವರ ಇಚ್ಛೆಯನ್ನು ಪ್ರಬಲಗೊಳಿಸಿತು. ಆದರೆ ವ್ಯಾಪಾರಿ ಮನೋಭಾವದ ಇವರ ತಂದೆಗೆ ಇದಾವುದೂ ಇಷ್ಟವಿದ್ದಿಲ್ಲ. ಮಗ ಹಣ ಗಳಿಸುವ ಯಾವುದಾದರೂ ವಿದ್ಯಾಭ್ಯಾಸವನ್ನು ಕೈಕೊಳ್ಳಬೇಕೆಂಬುದೇ ಇವರ ಬಯಕೆಯಾಗಿತ್ತು. ಪ್ರಯಾಸಕರವಾಗಿ ಹೆಚ್.ಎಸ್‌ಸಿ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದ ಮಗನು ಆಗತಾನೇ ಕಲಬುರ್ಗಿಯಲ್ಲಿ ಶ್ರೀ ಮಹಾದೇವಪ್ಪ ರಾಂಪುರೆಯವರು ಪ್ರಾರಂಭಿಸಿದ್ದ ಇಂಜನಿಯರಿಂಗ್ ಕಾಲೇಜಿನಲ್ಲಿಯೋ ಅಥವಾ ಪಾಲಿಟೆಕ್ನಿಕ್‌ನಲ್ಲಿಯೋ ವಿದ್ಯಾಭ್ಯಾಸ ಮಾಡಬೇಕೆಂಬುದು ತಂದೆಯವರ ಅಭಿಲಾಷೆಯಾಗಿತ್ತು. ಒಂದು ವೇಳೆ ಅವರ ಇಚ್ಛೆಯೇ ಕೈಗೂಡಿದ್ದರೆ ಕರ್ನಾಟಕಕ್ಕೆ ಒಬ್ಬ ಖ್ಯಾತ ಕಲಾವಿದ ದೊರೆಯದಂತಾಗುತ್ತಿತ್ತು. ಹಾಗಾಗದಿರುವುದು ಕರ್ನಾಟಕ ಕಲಾಕ್ಷೇತ್ರದ ಸೌಭಾಗ್ಯವೆಂದೇ ತಿಳಿಯಬೇಕು.

ತಾವು ಬಯಸಿದುದನ್ನು ಪಡೆಯಬೇಕೆಂಬ ಛಲ ಇವರಲ್ಲಿದ್ದುದರಿಂದ ತಂದೆಯವರ ಅರೆಮನಸ್ಸಿನ ಒಪ್ಪಿಗೆ ಪಡೆದು ಇವರು ಮುಂಬಯಿಗೆ ವ್ಯಾಸಂಗಕ್ಕೆ ಹೋಗುವಲ್ಲಿ ಸಫಲರಾದರು. ಜೆ.ಜೆ. ಕಲಾಶಾಲೆಯಲ್ಲಿ ಆಗ ಶಿರಗಾಂವಕರ್ ಎಂಬುವರು ಪೇಂಟಿಂಗ್ ವಿಭಾಗದ ಮುಖ್ಯಸ್ಥರಾಗಿದ್ದರು. ಗಂಭೀರ ಸ್ವಭಾವದ ಅವರು ಅತೀ ಶಿಸ್ತಿನ ವ್ಯಕ್ತಿಗಳಾಗಿದ್ದರು. ಇಂಟರ್‌ಮೀಡಿಯಟ್ ತರಗತಿಗೆ ಸೇರಲು ಬರುವ ವಿದ್ಯಾರ್ಥಿಗಳ ಇಂಟರ್‌ವ್ಯೂ ಇವರಿಂದಲೇ ನಡೆಯುತ್ತಿತ್ತು. ಖಂಡೇರಾವರವರು ಹೈದ್ರಾಬಾದಿನಲ್ಲಿಯ ಕಲಾ ಪರೀಕ್ಷೆಗಾಗಿ ಮಾಡಿದ್ದ ಹಲವಾರು ಶ್ರೇಷ್ಠ ಮಟ್ಟದ ಕಲಾಕೃತಿಗಳನ್ನು ವೀಕ್ಷಿಸಿದ ಶಿರಗಾಂವಕರ್‌ರವರು ಅತಿ ಅಚ್ಚರಿ ಮತ್ತು ಸಂತೋಷ ವ್ಯಕ್ತಪಡಿಸಿ ಇವರಿಗೆ ಇಂಟರ್‌ಮೀಡಿಯೇಟ್ ಪೇಂಟಿಂಗ್ ತರಗತಿಗೆ ಪ್ರವೇಶ ದೊರೆಕಿಸಿಕೊಟ್ಟರು.

ಮುಂಬಯಿಯಲ್ಲಿಯ ವ್ಯಾಸಂಗದ ನಾಲ್ಕೈದು ವರ್ಷಗಳ ಅವಧಿಯು ಊಟ ವಸತಿಯ ದೃಷ್ಟಿಯಿಂದಲೂ, ಆರ್ಥಿಕ ಸೌಲಭ್ಯದ ದೃಷ್ಟಿಯಿಂದಲೂ ಸುಸೂತ್ರವಾಗಿರಲಿಲ್ಲ. ಆಗಾಗ್ಗೆ ಕಾಡುತ್ತಿದ್ದ ಅನಾರೋಗ್ಯ ಮತ್ತು ಹಣದ ತೊಂದರೆಗಳು ಇವರ ವ್ಯಾಸಂಗಕ್ಕೆ ತೊಂದರೆಯೊಡ್ಡುತ್ತಿದ್ದವು. ಅರೆಮನಸ್ಸಿನಿಂದಲೇ ಮಗನನ್ನು ಮುಂಬಯಿಗೆ ಕಳಿಸಿದ ಇವರ ತಂದೆಯವರು ಕಡಿಮೆ ಹಣ ಕಳಿಸಿದರೆ, ಆರ್ಥಿಕ ಬಿಕ್ಕಟ್ಟಿನಿಂದಾದರೂ ಮಗನು ಕಲಬುರ್ಗಿಗೆ ವಾಪಸ್ಸು ಬರಬಹುದೆಂದು ಯೋಚಿಸಿದ್ದರು. ಆದರೆ ಇದಾವುದರಿಂದಲೂ ಧೃತಿಗೆಡದ ಖಂಡೇರಾವರದ್ದು ಛಲಹೊಂದಿದ್ದ ವ್ಯಕ್ತಿತ್ವವಾಗಿದ್ದಿತು. ಜೀವನದಲ್ಲಿ ಗುರಿ ಮುಟ್ಟುವುದೊಂದೇ ಅವರ ಏಕೈಕ ಹಂಬಲವಾಗಿದ್ದುದರಿಂದ, ಯಾವ ತೊಂದರೆಗಳನ್ನೂ ಲೆಕ್ಕಿಸದೆ ತಮ್ಮ ಕಲಾ ವ್ಯಾಸಂಗದಲ್ಲಿ ಆಳವಾಗಿ ತಮ್ಮನ್ನು ತೊಡಗಿಸಿಕೊಂಡರು. ಈ ಕಷ್ಟಕರವಾದ ದಿನಗಳಲ್ಲಿ ಅವರಿಗೆ ಆಸರೆಯಾಗಿ ನಿಂತವರೆಂದರೆ, ನೂತನ ಕಲಾ ಮಂದಿರದ ಶ್ರೀ ಜಿ.ಎಸ್. ದಂಡವತಿಮಠರವರು. ಕರ್ನಾಟಕದ ಅನೇಕ ಕಲಾವಿದರಿಗೆ ಆಶ್ರಯಸ್ಥಾನವೂ, ಸ್ಫೂರ್ತಿದಾಣವೂ, ಆಗಿದ್ದ ನೂತನ ಕಲಾ ಮಂದಿರವು ಖಂಡೇರಾವರ ಅನೇಕ ಸಂದಿಗ್ಧ ಸಮಯದಲ್ಲಿ ಸಹಾಯ ಹಸ್ತ ನೀಡಿತು. ಧಾರವಾಢ ಮೂಲದವರಾದ ದಂಡಾವತಿಮಠರವರ ಪ್ರೀತಿ ಅಂತಃಕರಣವನ್ನು ಮತ್ತು ಅವರಿಂದ ಕಲಾ ಪ್ರೇರಣೆಯನ್ನು ಪಡೆಯದಿರುವ ಕರ್ನಾಟಕದ ಕಲಾವಿದರೇ ವಿರಳವೆನ್ನಬಹುದೆಂದು ಖಂಡೇರಾವರು ಈಗಾಗಲೂ ಶ್ರದ್ಧಾಪೂರ್ವಕವಾಗಿ ಸ್ಮರಿಸುತ್ತಾರೆ. ತಮ್ಮ ಅನಾರೋಗ್ಯದ ನಿಮಿತ್ತ ಜೆ.ಜೆ. ಕಲಾ ಶಾಲೆಯಲ್ಲಿ ಪರೀಕ್ಷೆಗೆ ಕೂಡಲು ಅಸಮರ್ಥರಾದಾಗ ನೂತನ ಕಲಾ ಮಂದಿರದ ಮೂಲಕವೇ ಪರೀಕ್ಷೆ ಕಟ್ಟಿ ಇಂಟರ್‌ಮೀಡಿಯಟ್ ಮುಗಿಸಿದರು. ಮುಂದೆ ಡಿಪ್ಲೋಮಾ ಅಂತಿಮ ಪರೀಕ್ಷೆಯ ಸಮಯದಲ್ಲಿಯೂ ಇದೇ ಸಮಸ್ಯೆ ಪುನಃ ಎದುರಾಗಿ ದಂಡಾವತಿಮಠರವರ ಸಹಾಯದಿಂದಲೇ ಪರೀಕ್ಷೆ ಕಟ್ಟಿ ಉತ್ತೀರ್ಣರಾದರು. ಇವರ ಡಿಪ್ಲೋಮಾ ವ್ಯಾಸಂಗದ ಅವಧಿಯಲ್ಲಿ ಜೆ.ಜೆ. ಶಾಲೆಯ ಖ್ಯಾತ ಕಲಾ ಶಿಕ್ಷಕರಾದ ಪಳಸೀಕರ, ಬಾಬೂರಾವ್ ಸಂಡೊಪ್ಪಲ್ಕರ್‌ರವರಿಂದಲೂ, ನೂತನ ಕಲಾಮಂದಿರದ ಡಿ.ಎ. ಸೆಟ್ಟಿಯವರಿಂದಲೂ ಮಾರ್ಗದರ್ಶನ ಪಡೆದರು. ಪಳಸೀಕರರವರ ಭಾವಚಿತ್ರ ರಚನೆ ಮತ್ತು ಸಂಡೊಪ್ಪಲ್ಕರವರ ಸಂಯೋಜನಾ (Composition) ವಿಧಾನ ಇವರನ್ನು ಆಕರ್ಷಿಸಿತು. ಖಂಡೇರಾವ್‌ರಲ್ಲಿಯ ಕಲಾದಾಹ ಜೆ.ಜೆ. ಕಲಾಶಾಲೆಯಲ್ಲಿ ಕಲಿಯುವುದರಲ್ಲಿಯೇ ತೃಪ್ತಿಪಡಲಿಲ್ಲ. ಕಲೆಯಲ್ಲಿ ಹೆಚ್ಚಿನ ಪರಿಣತಿ ಪಡೆಯಲು ನೂತನ ಕಲಾ ಮಂದಿರದ ಮಾರ್ನಿಂಗ್ ಕ್ಲಾಸ್‌ಗಳಿಗೂ ಇವರು ಹಾಜರಾಗುತ್ತಿದ್ದರು. ಆಗಿನ ಸಮಕಾಲೀನ ಕಲಾವಿದರಾದ ಎನ್.ಎಸ್. ಬೇಂದ್ರೆ, ಬಿ. ಪ್ರಭಾ, ಆಲಮೇಲಕರ್ ಮುಂತಾದವರು ಅಕಾಡೆಮಿಕ್ ಪ್ರಭಾವದಿಂದ ಹೊರಬಂದು ಕ್ರಿಯೇಟಿವ್ ಶೈಲಿಯಲ್ಲಿ ಕಲಾಕೃತಿಯಲ್ಲಿ ರಚಿಸುತ್ತಿದ್ದ ಕಾಲವದು. ಇದು, ಸಹಜವಾಗಿಯೇ ಸೃಜನಾತ್ಮಕ ಮನೋಭಾವವನ್ನು ಹೊಂದಿದ್ದ ಖಂಡೇರಾವರನ್ನು ಆಕರ್ಷಿಸುತ್ತಿತ್ತು. ಈ ಕಲಾವಿದರ ಯಾವುದೇ ಪ್ರಾತ್ಯಕ್ಷಿಕೆಗಳನ್ನು (ಡೆಮೋನ್‌ಸ್ಟ್ರೇಶನ್‌ಗಳನ್ನು) ಇವರು ತಪ್ಪಿಸಿಕೊಳ್ಳುತ್ತಿರಲಿಲ್ಲ. ಇವರಲ್ಲಿ ಖಂಡೇರಾವರ ಮೇಲೆ ಅತಿ ಆಳವಾದ ಪ್ರಭಾವ ಬೀರಿದವರೆಂದರೆ ಎನ್.ಎಸ್. ಬೇಂದ್ರೆಯವರು. ಅವರ ಸಂಯೋಜನಾ ವಿಧಾನ, ವರ್ಣಗಳ ಬಳಕೆ ಇವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದವು.

ಜೆ.ಜೆ. ಕಲಾಶಾಲೆಯಲ್ಲಿನ ಆಗಿನ ಕಟ್ಟುನಿಟ್ಟಾದ, ಶಿಸ್ತಿನ ವ್ಯಾಸಂಗ ಪದ್ಧತಿ ತಮ್ಮ ಜೀವನದಲ್ಲಿ ಮುಂದೆ ಕಲಾಸಾಧನೆಗೆ ಹೇಗೆ ಭದ್ರ ಬುನಾದಿಯಾಯಿತೆಂಬುದನ್ನು ಈಗಲೂ ಖಂಡೇರಾವ್‌ರವರು ಅಭಿಮಾನದಿಂದ ತಮ್ಮ ಶಿಷ್ಯರೆದುರಿಗೆ ನೆನಪಿಸಿಕೊಳ್ಳುತ್ತಾರೆ. ಕಲೆಯ ಅಂತಃಸತ್ವವೇ ಡ್ರಾಯಿಂಗ್ ಎಂಬುದು ಸದಾಕಾಲಕ್ಕೂ ವಿವಾದಾತೀತ. ಈ ಉದ್ದೇಶಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ದಿನಾಲು ಹಲವಾರು ಸ್ಕೆಚ್‌ಗಳನ್ನು ಮಾಡುವುದು ಆಗ ಅತ್ಯವಶ್ಯಕವಾಗಿದ್ದಿತು. ಸ್ಪರ್ಧಾತ್ಮಕ ಮನೋಭಾವದಿಂದ ವಿದ್ಯಾರ್ಥಿಗಳು ದಿವಸಕ್ಕೆ ಎರಡುನೂರಕ್ಕೂ ಮಿಗಿಲಾಗಿ ಸ್ಕೆಚ್ಚುಗಳನ್ನು ಮಾಡುತ್ತಿದ್ದರು. ಪಠ್ಯಕ್ರಮಗಳ ಜೊತೆಗೆ ಮೊದಲಿನಿಂದಲೂ ಪ್ರಕೃತಿ ದೃಶ್ಯಗಳಲ್ಲಿ ಆಸಕ್ತರಾದ ಖಂಡೇರಾವ್‌ರವರು,

ಬೆಳಗಾದೊಡನೆಯೇ ಏಕಾಂಗಿಯಾಗಿ ತಮ್ಮ ಕಲಾ ಸಾಮಗ್ರಿಗಳನ್ನು ಹೊತ್ತುಕೊಂಡು ತಮ್ಮ ನಿವಾಸದ ಸುತ್ತಲಿನ ಸ್ಥಳಗಳಿಗೆ ಚಿತ್ರ ರಚಿಸಲು ಹೊರಟುಬಿಡುತ್ತಿದ್ದರು. ಹೀಗೆ ಅವಿಶ್ರಾಂತವಾದ ಕಠಿಣ ಪರಿಶ್ರಮದ ದಿನಚರಿ ಅವರದ್ದಾಗಿತ್ತು. ಆ ದಿನಗಳಲ್ಲಿ ಇವರ ಜ್ಞಾನಾರ್ಜನೆಗೆ ಸಹಾಯವಾದುದು ಕಲಾ ಶಾಲೆಯಲ್ಲಿಯ ಗ್ರಂಥ ಭಂಡಾರದ ಪುಸ್ತಕಗಳು ಮತ್ತು ಕಲಾ ಪ್ರದರ್ಶನಗಳು. ಮುಂಬಯಿಯಲ್ಲಿ ನಡೆಯುತ್ತಿದ್ದ ಪ್ರತಿಯೊಂದು ಕಲಾ ಪ್ರದರ್ಶನವನ್ನು ವೀಕ್ಷಿಸುವುದು, ವಿಚಾರ ವಿನಿಮಯ ಮಾಡಿಕೊಳ್ಳುವುದು ಆಗ ಕಟ್ಟುನಿಟ್ಟಿನ ನಿಯಮವಾಗಿದ್ದಿತು. ಇದರಿಂದ ವಿದ್ಯಾರ್ಥಿಗಳಲ್ಲಿಯ ವಿಮರ್ಶಾಬುದ್ಧಿ ಜಾಗೃತವಾಗಿ, ಸಮಕಾಲೀನ ಕಲೆಯಲ್ಲಿಯ ವಿನೂತನ ವಿಧಾನಗಳನ್ನು, ಪ್ರಯೋಗಗಳನ್ನು ಅರಿಯಲು ಅನುಕೂಲವಾಗುತ್ತಿತ್ತು.

ವಿದ್ಯಾರ್ಥಿ ದೆಶೆಯಲ್ಲಿಯೇ, ಭಾವಚಿತ್ರ, ಪ್ರಕೃತಿ ಚಿತ್ರ ರಚಿಸುವಲ್ಲಿ ಪ್ರಾವೀಣ್ಯತೆ ಪಡೆದಿದ್ದ ಇವರು ಆಗಿನ ಪ್ರತಿಭಾವಂತ ವಿದ್ಯಾರ್ಥಿಗಳ ಸಾಲಿನಲ್ಲಿದ್ದರು. ಕಲಾ ಪರೀಕ್ಷೆಗಳಲ್ಲಿಯೂ ಅಂತಿಮ ತರಗತಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದುತ್ತ ೧೯೬೩ರಲ್ಲಿ ಡಿಪ್ಲೋಮಾ ಮುಗಿಸಿದರು.

ಇವರ ವ್ಯಾಸಂಗದ ದಿನಗಳಲ್ಲಿ ಖ್ಯಾತ ಕಲಾವಿದರಾದ ಅಡವಿರೇಕರ್, ಮೃಗಾಂಕ ಜೋಷಿ ಮತ್ತು ದಿವಂಗತ ಜಿ.ಎನ್. ಶೆಣೈರವರು ಇವರ ಸಹಪಾಠಿಗಳಾಗಿದ್ದರು. ವ್ಯಾವಹಾರಿಕ ಮನೋಭಾವದ ಹಾಗೂ ಸದಾ ಚಟುವಟಿಕೆಯ ಕೇಂದ್ರ ಬಿಂದುವಾದ ಶೆಣೈರವರ ಮತ್ತು ಅಂತರ್ಮುಖಿಗಳಾಗಿ ಸದ್ದುಗದ್ದಲವಿಲ್ಲದೆ ಕಲಾ ಸಾಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಿದ್ದ ಖಂಡೇರಾವರದು ವಿಭಿನ್ನ ವ್ಯಕ್ತಿತ್ವಗಳಾದರೂ ಇವರ ಗೆಳೆತನ ಬಹಳ ಅನ್ಯೋನ್ಯವಾಗಿದ್ದಿತು. ವ್ಯಾಸಂಗ ಮುಗಿದ ನಂತರ ಇಬ್ಬರ ದಾರಿಗಳು ಭಿನ್ನವಾದಾಗಲೂ, ಇವರಿಬ್ಬರ ನಡುವಿನ ಸ್ನೇಹ, ಶೆಣೈರವರ ಅಂತಿಮ ದಿನಗಳವರೆಗೆ ಮುಂದುವರೆದುಕೊಂಡು ಬಂದಿತ್ತು. ಸಾರ್ವಜನಿಕರಲ್ಲಿ ಕಲೆಯ ಅರಿವು ಮೂಡಿಸಲು ಹಾಗೂ ಕರ್ನಾಟಕದಲ್ಲಿ ಕಲಾವಿದರನ್ನು ಸಂಘಟಿಸಿ ಕಲೆಯನ್ನು ಬೆಳೆಸಲು ಶೆಣೈರವರು ಹಮ್ಮಿಕೊಳ್ಳುತ್ತಿದ್ದ ಅನೇಕ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಖಂಡೇರಾವರು ಅವರಿಗೆ ಯಾವಾಗಲೂ ಬೆಂಬಲವಾಗಿ ನಿಲ್ಲುತ್ತಿದ್ದರು. ಶೆಣೈರವರ ನಿಧನ ತಮಗೆ ವೈಯಕ್ತಿಕವಾಗಿಯೂ ಮತ್ತು ಕಲಾ ಕ್ಷೇತ್ರಕ್ಕೂ ಒಂದು ಬಹುದೊಡ್ಡ ಹಾನಿ ಎಂದು ಖಂಡೇರಾವರವರು ನೊಂದು ನುಡಿಯುತ್ತಾರೆ.

ಡಿಪ್ಲೋಮಾ ಶಿಕ್ಷಣ ಮುಗಿದ ನಂತರ ಜೆ.ಜೆ. ಕಲಾಶಾಲೆಯಲ್ಲಿಯೇ ಭಿತ್ತಿಚಿತ್ರಗಳ ಸ್ನಾತಕೋತ್ತರ ಪದವಿಯನ್ನು ಪಡೆಯಬೇಕೆಂಬುದು ಇವರ ಇಚ್ಛೆಯಾಗಿದ್ದಿತು. ಜೊತೆಗೆ ಡಿ.ಟಿ.ಸಿ. ಕೋರ್ಸನ್ನು ಸಹ ಮಾಡುವ ಹಂಬಲವಿತ್ತು. ಆದರೆ ಕೌಟಂಬಿಕ ಸಮಸ್ಯೆಗಳು ಇವರ ಆಸೆಗೆ ವ್ಯತಿರಿಕ್ತವಾಗಿದ್ದವು. ತಂದೆ ತಾಯಿಯವರ ಒತ್ತಾಯದ ಮೇರೆಗೆ ಕಬಲುರ್ಗಿಗೆ ಹಿಂದಿರುಗಿ ಬರಲೇಬೇಕಾಯಿತು. ಇವರನ್ನು ಕಲಬುರ್ಗಿಯಲ್ಲಿಯೇ ಹಿಡಿದು ನಿಲ್ಲಿಸುವ ಉಪಾಯವಾಗಿ, ೧೯೬೪ರಲ್ಲಿ ಇವರ ವಿವಾಹವು ಶ್ರೀಮತಿ ವೀರಮ್ಮನವರೊಡನೆ ನಡೆಯಿತು. ಗೃಹಸ್ಥರಾದ ನಂತರ ಸಂಸಾರದ ಜವಾಬ್ದಾರಿಯನ್ನು ಹೊತ್ತ ಇವರಿಗೆ ಜೀವನೋಪಾಯಕ್ಕಾಗಿ ಯಾವುದಾದರೂ ನೌಕರಿಯನ್ನು ಮಾಡಲೇಬೇಕಾದ ಅನಿವಾರ್ಯತೆ ಎದುರಾಯಿತು. ಆಗ ರಾಜ್ಯ ವಾರ್ತಾ ಮತ್ತು ಪ್ರಸಾರ ಇಲಾಖೆಯಲ್ಲಿ ಖಾಲಿಯಿದ್ದ ಕಲಾವಿದ ಹುದ್ದೆಯ ಸಂದರ್ಶನಕ್ಕಾಗಿ ಇವರಿಗೆ ಬೆಂಗಳೂರಿನಿಂದ ಕರೆ ಬಂದಿತು. ಶ್ರೀ ಸಿ.ವಿ. ಕರಡಗಿ ಎಂಬುವರು ಆಗಿನ ಮೈಸೂರು ರಾಜ್ಯ ಸರಕಾರದ ಈ ಇಲಾಖೆಯ ಕಲಾ ನಿರ್ದೇಶಕರಾಗಿದ್ದು, ಈ ಖಾಲಿ ಹುದ್ದೆಯ ಸಂದರ್ಶಕರಲ್ಲೊಬ್ಬರಾಗಿದ್ದರು. ಸ್ವತಃ ಕಲಾವಿದರಾದ ಇವರು, ಖಂಡೇರಾವರವರು ಸಂದರ್ಶನಕ್ಕಾಗಿ ತೆಗೆದುಕೊಂಡು ಹೋಗಿದ್ದ ಹಲವಾರು ಉನ್ನತ ಮಟ್ಟದ ಕಲಾಕೃತಿಗಳನ್ನು ವೀಕ್ಷಿಸಿ, ಇವರ ಅಗಾಧವಾದ ಪ್ರತಿಭೆಯನ್ನು ಕಂಡು

ವಿಸ್ಮಯಗೊಂಡರು. ಒಂದು ವೇಳೆ ಇವರಿಗೆ ಈ ಹುದ್ದೆ ದೊರಕಿದ್ದೇ ಆದರೆ, ಸರಕಾರಿ ನೌಕರಿಯ ಜಡಭರಿತ ಪ್ರವೃತ್ತಿಯೇ ಇವರನ್ನು ಆವರಿಸಿ, ಇವರಲ್ಲಿಯ ಕಲಾ ಸಾಮರ್ಥ್ಯ ನಿರರ್ಥಕವಾಗಿ ಇವರಲ್ಲಿದ್ದ ಪ್ರತಿಭೆ ಪ್ರಾರಂಭದಲ್ಲಿಯೇ ಮುರುಟಿಕೊಳ್ಳುತ್ತದೆ ಎಂದು ಯೋಚಿಸಿ ಈ ಹುದ್ದೆಗೆ ಇವರನ್ನು ನೇಮಿಸಿಕೊಳ್ಳಲು ಇಷ್ಟಪಡದೆ ಈ ವಿಷಯವನ್ನು ಖಂಡೇರಾವ್‌ರವರಿಗೆ ಮನದಟ್ಟಾಗುವಂತೆ ತಿಳಿಹೇಳಿ, ಕಲಬುರ್ಗಿಯಲ್ಲಿ ಸ್ವತಂತ್ರವಾಗಿ ಒಂದು ಕಲಾ ಶಾಲೆಯನ್ನು ತೆರೆದಿದ್ದೇ ಆದರೆ ಅದಕ್ಕೆ ಸಾಧ್ಯವಾದಷ್ಟು ಸಹಾಯವನ್ನು ಮಾಡುವುದಾಗಿ ಅಭಯವಿತ್ತು ಸರಕಾರಿ ನೌಕರಿಯನ್ನು ಹಿಡಿಯುವ ಇವರ ಪ್ರಯತ್ನಕ್ಕೆ ವಿರಾಮ ಹಾಕಿದರು.

ಸಂಸ್ಥಾಪಕರಾಗಿ

ಆಗ ಕರ್ನಾಟಕದಲ್ಲಿ ಕೆಲವೇ ಕಲಾ ಶಾಲೆಗಳು ಅಂದರೆ ಮುಂಬಯಿ ಕರ್ನಾಟಕ ಮತ್ತು ಮದ್ರಾಸ್ ಕರ್ನಾಟಕದಲ್ಲಿದ್ದು ಕಲಬುರ್ಗಿಯಲ್ಲಿ ನೂತನ ವಿದ್ಯಾಲಯದಲ್ಲಿ ಶ್ರೀ ಶಂಕರರಾವ್ ಆಳಂದಕರ್‌ರವರ ನೇತೃತ್ವದಲ್ಲಿ ಕಲಾ ವಿಭಾಗ ಪ್ರಾರಂಭಗೊಂಡಿತ್ತು. ಜೆ.ಜೆ. ಕಲಾಶಾಲೆಯಲ್ಲಿ ಅಭ್ಯಾಸ ಮುಗಿಸಿದ್ದ ಆಳಂದಕರ್‌ರವರು, ನಿಜಾಮ ಸರಕಾರದ ಕಲಾ ಶಿಕ್ಷಕ ಹುದ್ದೆಯಿಂದ ನಿವೃತ್ತರಾಗಿ ನೂತನ ವಿದ್ಯಾಲಯದಲ್ಲಿ ಕಲಾ ಶಿಕ್ಷಣ ಪ್ರಾರಂಭಿಸುವ ಮೂಲಕ ಅನೇಕ ಯುವ ಕಲಾವಿದರಿಗೆ ಮಾರ್ಗದರ್ಶಕರಾಗಿದ್ದರು. ಕಲಬುರ್ಗಿಯಲ್ಲಿ ತಾವೊಂದು ಕಲಾ ಶಾಲೆಯನ್ನು ತೆರೆಯಬೇಕೆಂಬ ಬಯಕೆಯನ್ನು ಖಂಡೇರಾವ್‌ರವರು ಇವರ ಹತ್ತಿರ ಪ್ರಸ್ತಾಪಿಸಿದಾಗ, ಅವರಿಂದ ಉತ್ತೇಜನಕಾರಿಯಾದ ಪ್ರತಿಕ್ರಿಯೆ ದೊರಕಲಿಲ್ಲ. ಕಲಾ ಶಾಲೆಯನ್ನು ನಡೆಸುವಲ್ಲಿ ಎದುರಾಗುವ ಅನೇಕ ಸಮಸ್ಯೆಗಳನ್ನೂ, ಕಷ್ಟಕಾರ್ಪಣ್ಯಗಳನ್ನು ಶ್ರೀ ಆಳಂದಕರ್‌ರವರು ಖಂಡೇರಾವ್‌ರವರಿಗೆ ಬಗೆಬಗೆಯಾಗಿ ತಿಳಿಹೇಳಿದರು. ಆದಾಗ್ಯೂ ಖಂಡೇರಾವರು ಕಲಾ ಶಾಲೆಯನ್ನು ಸ್ಥಾಪಿಸಬೇಕೆಂಬ ತಮ್ಮ ಸಂಕಲ್ಪದಿಂದ ವಿಮುಖರಾಗಲಿಲ್ಲ. ಅವರ ಈ ಅಚಲ ನಿರ್ಧಾರದ ಫಲವಾಗಿ ದಿನಾಂಕ ೧೪-೧೧-೧೯೬೫ರಂದು "ದಿ ಐಡಿಯಲ್ ಫೈನ್ ಆರ್ಟ್ ಇನ್ಸ್‌ಟಿಟ್ಯೂಟ್" ಎಂಬ ಹೆಸರಿನೊಂದಿಗೆ, ಕಲಾ ಶಾಲೆ ಸ್ಥಾಪಿತವಾಗಿ, ವಿದ್ಯಾಮಂತ್ರಿಗಳಾದ ಶ್ರೀ ಎಸ್.ಆರ್. ಕಂಠಿಯವರಿಂದ ಒಂದು ಖಾಸಗಿ ನಿವಾಸದಲ್ಲಿ ಉದ್ಘಾಟಿಸಲ್ಪಟ್ಟಿತು. ಈ ಸಂಸ್ಥೆಯ ಅಧ್ಯಕ್ಷರಾಗಿ ನಗರದ ಗಣ್ಯ ವ್ಯಕ್ತಿಗಳಾಗಿದ್ದ, ದಿವಂಗತ ಕರಣಪ್ಪ ಅಂದೋಲಾರವರೂ, ಉಪಾಧ್ಯಕ್ಷರಾಗಿ ಖ್ಯಾತ ಕಲಾವಿದರಾದ ದಿ|| ಶ್ರೀ ಎಸ್.ಎಂ. ಪಂಡಿತರವರೂ ಮತ್ತು ಸದಸ್ಯರಾಗಿ ಅನೇಕ ಗಣ್ಯರೂ ನೇಮಕಗೊಂಡರು.

ಕೇವಲ ಐದಾರು ವಿದ್ಯಾರ್ಥಿಗಳೊಡನೆ ಪ್ರಾರಂಭವಾದ ಡಿಪ್ಲೊಮಾ ಪ್ರಥಮ ತರಗತಿಗೆ ಖಂಡೇರಾವರೊಬ್ಬರೇ ಅಧ್ಯಾಪಕರು. ಈ ಪ್ರಥಮ ಸಾಲಿನ ವಿದ್ಯಾರ್ಥಿಗಳ ಸಾಲಿಗೆ ಸೇರಿದವರೆಂದರೆ, ವಿ.ಜಿ. ಅಂದಾನಿ, ಎಂ.ಬಿ. ಲೋಹಾರ, ಬಸವರಾಜ ಉಪ್ಪಿನ್, ಎಸ್.ಬಿ. ಉಪ್ಪಿನ್, ಮಂಗಳಾ ಪಂಡಿತ್ ಮೊದಲಾದವರು. ಮುಂದೆ ಖ್ಯಾತ ಕಲಾವಿದರಾಗಿ ರೂಪಗೊಂಡ ಈ ವಿದ್ಯಾರ್ಥಿಗಳ ಅಭ್ಯುದಯಕ್ಕೆ ಖಂಡೇರಾವರು ಬಹಳಷ್ಟು ಶ್ರಮವಹಿಸಿದರು. ಬಾಂಬೆ ಶಿಕ್ಷಣ ಪದ್ಧತಿಯಿಂದ ಪ್ರಭಾವಿತರಾಗಿದ್ದ ಇವರು ಅನೇಕ ಹೊಸ ಹೊಸ ಆಶಯಗಳನ್ನು, ವಿಚಾರಗಳನ್ನು ಹೊಂದಿದವರಾಗಿದ್ದರು. ಕಲಾ ಶಾಲೆಯಲ್ಲಿ ಯಾವುದೇ ಹೆಚ್ಚಿನ ಸೌಲಭ್ಯಗಳೂ, ಅನುಕೂಲತೆಗಳೂ ಇಲ್ಲದೇ ಹೋದರೂ, ವಿದ್ಯಾರ್ಥಿಗಳಲ್ಲಿ ಕಲಾಪ್ರಜ್ಞೆ ಮೂಡಿಸುವಲ್ಲಿ ಖಂಡೇರಾವ್‌ರವರು ಹೆಚ್ಚಿನ ಆಸಕ್ತಿ ಹೊಂದಿದ್ದರು. ಶಾಸ್ತ್ರೀಯ ಕಲಾ ವ್ಯಾಸಂಗದ ಜೊತೆ ಜೊತೆಗೆ ಕಲಾ ಕ್ಷೇತ್ರದಲ್ಲಾಗುತ್ತಿರುವ ಬದಲಾವಣೆಗಳಿಗೆ ವಿದ್ಯಾರ್ಥಿಗಳ ಮನಸ್ಸು ತೆರೆದುಕೊಳ್ಳುವಂತೆ ಅನೇಕ ಬಗ್ಗೆಯ ವಿಧಾನಗಳನ್ನು ಪ್ರಯೋಗಿಸಿದರು. ಆಗಿನ ಹೆಸರಾಂತ ಕಲಾವಿದರಾದ, ವಿ.ಕೆ. ಖರಾಸಕರ್, ವಿ.ಜಿ. ಸಿಂಧೂರರವರನ್ನು ಕಲಾ ಶಾಲೆಗೆ ಪ್ರಾತ್ಯಕ್ಷಿಕೆಗಾಗಿ ಆಮಂತ್ರಿಸಿ, ಚಿತ್ರ ಕಲೆಯಲ್ಲಿಯ

ಅನೇಕ ವಿಧಿ ವಿಧಾನಗಳನ್ನು ಅರಿಯಲು ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಟ್ಟರು. ಬಸವಕಲ್ಯಾಣದಲ್ಲಿ ಬಸವೇಶ್ವರರ ಅಷ್ಟಮಾನೋತ್ಸವದ ಸಂದರ್ಭದಲ್ಲಿ ಶಾಲೆಯ ವತಿಯಿಂದ ಸಮೂಹ ಕಲಾ ಪ್ರದರ್ಶನವನ್ನು ಏರ್ಪಡಿಸಿ, ಸಾರ್ವಜನಿಕರಲ್ಲಿ ಕಲಾಪ್ರಜ್ಞತೆಯನ್ನು ಮೂಡಿಸಿದರಲ್ಲದೆ, ತಮ್ಮ ವಿದ್ಯಾರ್ಥಿಗಳಿಗೆ ಪ್ರದರ್ಶನಗಳಲ್ಲಿ ಭಾಗವಹಿಸುವುದು ಕಲಾವಿದನಿಗೆ ಎಷ್ಟು ಪ್ರಯೋಜನಕಾರಿ ಎಂದು ಮನವರಿಕೆ ಮಾಡಿಕೊಟ್ಟರು. ಆಗಾಗ್ಗೆ ಶಾಲೆಯಲ್ಲಿ ಸಾಹಿತಿಗಳ ಚರ್ಚಾಕೂಟಗಳನ್ನು ಏರ್ಪಡಿಸುತ್ತಾ ವಿದ್ಯಾರ್ಥಿಗಳಿಗೆ ಇತರ ಸಾಂಸ್ಕೃತಿಕ ರಂಗಗಳ ಪರಿಚಯವನ್ನು ಮಾಡಿಕೊಡುತ್ತಿದ್ದರು. ಡಿಪ್ಲೊಮಾ ಕೋರ್ಸಿನ ಎಲ್ಲ ತರಗತಿಗಳಿಗೂ, ತಾವೊಬ್ಬರೇ ಕಲಾ ಶಿಕ್ಷಕರಾಗಿ ಹಗಲಿರುಳೆನ್ನದೆ ದುಡಿದ ಇವರ ಪ್ರಯತ್ನದ ಫಲವಾಗಿ, ಪರೀಕ್ಷೆಯಲ್ಲಿ ಫಲಿತಾಂಶ ಅತಿ ಉನ್ನತ ಮಟ್ಟದ್ದಾಗಿರುತ್ತಿತ್ತು. ಅನೇಕ ವಿದ್ಯಾರ್ಥಿಗಳು ರ್‍ಯಾಂಕ್ ಪಡೆಯುತ್ತಲೂ ಇದ್ದರು. ಇಷ್ಟೆಲ್ಲಾ ಪರಿಶ್ರಮದ ನಡುವೆಯೂ ಇವರ ವೈಯಕ್ತಿಕ ಕಲಾ ಸಾಧನೆ ನಿರಂತರವಾಗಿ ಮುಂದುವರೆದುಕೊಂಡು ಬಂದಿತ್ತು. ೧೯೬೮ರಲ್ಲಿ ಕರ್ನಾಟಕ ಲಲಿತಕಲಾ ವಾರ್ಷಿಕ ಪ್ರದರ್ಶನದಲ್ಲಿ ಇವರ ಜಲವರ್ಣ ಕೃತಿ "ಮಳೆಯ ನಂತರ" "After the Rains" ಪ್ರಶಸ್ತಿ ಪಡೆಯಿತು. ನಂತರ ೧೯೬೯-೧೯೭೦ರಲ್ಲಿಯೂ ಸತತವಾಗಿ ಈ ಪ್ರಶಸ್ತಿ ಇವರದಾಯಿತು. ಇವರ "ಆಫ್ಟರ್ ದಿ ರೇನ್ಸ್" ಕೃತಿ ಈಗ ಸಿಂಗಾಪೂರದ ಪ್ರತಿಷ್ಠಿತ ಕಲಾ ಸಂಗ್ರಹಾಲಯದಲ್ಲಿದೆ.

ಕಲಾ ಶಾಲೆಯಲ್ಲಿ ತರಗತಿಗಳು ಹೆಚ್ಚಿದಂತೆಲ್ಲ, ಆರ್ಥಿಕ ಸಂಕಷ್ಟಗಳೂ ಅಧಿಕವಾದವು. ಸಂಸ್ಥೆಯ ಸದಸ್ಯರಿಂದಲೂ ಯಾವುದೇ ರೀತಿಯ ಸಹಾಯವು ದೊರಕುತ್ತಿರಲಿಲ್ಲ. ಸರಕಾರದಿಂದ ಯಾವುದೇ ಬಗೆಯ ಆರ್ಥಿಕ ಸಹಾಯ ದೊರೆಯಲಿಲ್ಲ. ಎಲ್ಲ ರೀತಿಯ ಸಹಾಯ ನೀಡುವ ಭರವಸೆ ಇತ್ತಿದ್ದ, ಶ್ರೀ ಕರಡಗಿಯವರು ಸಹ ಆಗಲೇ ನಿವೃತ್ತಿ ಹೊಂದಿದ್ದರು. ಯಾರ ಮುಂದೆಯೂ ಸಹಾಯಕ್ಕಾಗಿ ಕೈ ಚಾಚದ ಖಂಡೇರಾವರಿಗೆ ಮನೆಯಿಂದಲೂ ಹಣದ ಸಹಾಯ ದೊರೆಯಲಿಲ್ಲ. ಮಗನು ನಿಗದಿತವಾದ ವೇತನ ಪಡೆಯುವ ಶಿಕ್ಷಕ ವೃತ್ತಿಯನ್ನು ಹೊಂದಿರುವನೆಂದು ಭಾವಿಸಿದ್ದ ತಂದೆಯವರಿಗೆ ಇವರ ನಿಜಪರಿಸ್ಥಿತಿಯ ಅರಿವಾಗಿ ಅಸಮಾಧಾನಗೊಂಡರು.

೧೯೭೧ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಹಾಗೂ ಕಲಬುರ್ಗಿಯ ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಪೂಜ್ಯ ಶರಣಬಸವಪ್ಪ ಅಪ್ಪರವರ ಪ್ರಯತ್ನದ ಫಲವಾಗಿ, ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ, ಪದವಿ ಶಿಕ್ಷಣದಲ್ಲಿ (ಬಿ.ಎ.) ಚಿತ್ರಕಲೆಯನ್ನು ಮುಖ್ಯ ವಿಷಯವನ್ನಾಗಿ ಪ್ರಾರಂಭಿಸುವುದಕ್ಕೆ ವಿಶ್ವವಿದ್ಯಾಲಯದಿಂದ ಅನುಮತಿ ದೊರಕಿತು. ಖಂಡೇರಾವರ ಬಗ್ಗೆ ಆಗಲೇ ಬಹಳಷ್ಟು ತಿಳಿದುಕೊಂಡಿದ್ದ ಪೂಜ್ಯ ಶರಣಬಸಪ್ಪ ಅಪ್ಪನವರು ಇವರನ್ನೇ ಕಲಾ ಅಧ್ಯಾಪಕರನ್ನಾಗಿ ನೇಮಿಸಿದ ಪರಿಣಾಮವಾಗಿ ಎರಡೂ ಕಲಾ ಶಾಲೆಗಳಲ್ಲಿಯೂ ದುಡಿಯುವ ಜವಾಬ್ದಾರಿ ಶ್ರೀ ಖಂಡೇರಾವರದಾಯಿತು.

ಕಲಾ ಶಾಲೆಯು ಆರ್ಥಿಕ ದೃಷ್ಟಿಯಿಂದ ಸ್ವಲ್ಪಮಟ್ಟಿಗೆ ಚೇತರಿಸಿಕೊಂಡರೂ, ಎರಡೂ ಶಾಲೆಗಳನ್ನು ಒಬ್ಬರಿಂದಲೇ ನಿಭಾಯಿಸುವುದಕ್ಕೆ ಖಂಡೇರಾವರಿಗೆ ಸಮಯ ಸಾಲದಾಯಿತು. ಆಗ ತಾನೇ ಇವರ ಶಿಷ್ಯರಾದ ಶ್ರೀ ವ್ಹಿ.ಜಿ. ಅಂದಾನಿಯವರು ಡಿಪ್ಲೋಮಾ ಮುಗಿಸಿದ್ದರು. ಇವರಲ್ಲಿ ಅತಿ ವಿಶ್ವಾಸ, ಮತ್ತು ಭರವಸೆಗಳನ್ನು ಹೊಂದಿದ್ದ ಖಂಡೇರಾವರವರು ತಮ್ಮ ಸಂಸ್ಥೆಯನ್ನು, ಸೂಕ್ತ ರೀತಿಯಲ್ಲಿ ಮುನ್ನಡೆಸಿಕೊಂಡು ಹೋಗುವ ಅರ್ಹ ವ್ಯಕ್ತಿ ಅಂದಾನಿಯವರೇ ಎಂಬ ನಿರ್ಣಯಕ್ಕೆ ಬಂದು, ಕಲಾ ಶಾಲೆಯ ಪೂರ್ಣ ಜವಾಬ್ದಾರಿಯನ್ನು ಅವರಿಗೆ ವಹಿಸಿಕೊಟ್ಟರು. ಖಂಡೇರಾವರ ಭರವಸೆಯು ಹುಸಿಯಾಗದೆ, ಈ ಎರಡೂವರೆ ದಶಕದ ಅವಧಿಯಲ್ಲಿ ಅಂದಾನಿಯವರ ನೇತೃತ್ವದಲ್ಲಿ ಈ ಸಂಸ್ಥೆ, ಊಹಿಸಲಾರದಷ್ಟು ಅಗಾಧ ಪ್ರಮಾಣದಲ್ಲಿ ಬೆಳೆದಿದೆ. ಈಗ ತನ್ನದೇ ಆದ ಸ್ವಂತ

ಕಟ್ಟಡವನ್ನು ಹೊಂದಿದೆ. ಈ ಸಂಸ್ಥೆಯಲ್ಲಿ ಅನೇಕ ಕಲಾ ಮಾಧ್ಯಮಗಳಲ್ಲಿ ಅಂದರೆ ಚಿತ್ರ, ಶಿಲ್ಪ, ಗ್ರಾಫಿಕ್, ಫೋಟೋಗ್ರಾಫಿ, ಅಪ್ಲೈಡ್ ಆರ್ಟ್‌ಗಳಲ್ಲಿ ಕಲಾ ಶಿಕ್ಷಣ ನೀಡಲಾಗುತ್ತಿದೆ. ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಕಲೆಯಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ಆರಂಭಿಸಿದ ಹೆಗ್ಗಳಿಕೆಯೂ ಈ ಸಂಸ್ಥೆಯದು.

ದಿ ಐಡಿಯಲ್ ಫೈನ್ ಆರ್ಟ್ ಇನ್ಸ್ಟಿಟ್ಯೂಟನ್ನು ಅಂದಾನಿಯವರಿಗೆ ವಹಿಸಿಕೊಟ್ಟು, ಶರಣ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಕಲಾ ವಿಭಾಗಕ್ಕೆ ಮುಖ್ಯಸ್ಥರಾಗಿ, ಪ್ರಾಧ್ಯಾಪಕರಾಗಿ ನೇಮಕಗೊಂಡ ನಂತರ ಇವರ ಜೀವನದ ಮತ್ತೊಂದು ಮಜಲು ಪ್ರಾರಂಭವಾಯಿತು. ಪುನಃ ಮತ್ತೊಂದು ವಿಭಾಗವನ್ನು ಕಟ್ಟಿ ಬೆಳೆಸುವ ಹೊಣೆಗಾರಿಕೆ. ಐಡಿಯಲ್ ಫೈನ್ ಆರ್ಟ್ ಶಾಲೆಯನ್ನು ಕಟ್ಟುವ ದಿನಗಳ ಪುನರಾವರ್ತನೆ. ಕೇವಲ ೬-೭ ವಿದ್ಯಾರ್ಥಿಗಳಿಂದ ಪ್ರಾರಂಭವಾದ ಕಲಾ ವಿಭಾಗದಲ್ಲಿ ಎಲ್ಲ ವಿಷಯಗಳಿಗೂ ಇವರೊಬ್ಬರೇ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಬೇಕಾದ ಪರಿಸ್ಥಿತಿ. ಜೊತೆಗೆ ಈ ವಿಭಾಗವನ್ನು ನಿರ್ವಹಿಸಿಕೊಂಡು ಹೋಗುವ ಸಕಲ ಆಡಳಿತಾತ್ಮಕ ಕೆಲಸಗಳ ಜವಾಬ್ದಾರಿಯೂ ಇವರ ಮೇಲೆಯೇ ಇತ್ತು. ಮುಂದೆ ವಿಭಾಗ ಬೆಳೆದ ಮೇಲೆ ಮೂರೂ ತರಗತಿಗಳನ್ನು ನಿಭಾಯಿಸಬೇಕಾದ ಅನಿವಾರ್ಯ ಪರಿಸ್ಥಿತಿ ಇವರದೇ ಆಯಿತು. ೧೯೮೩ರಲ್ಲಿ ಪೇಂಟಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಶಿಕ್ಷಣ ಕೇಂದ್ರ ಪ್ರಾರಂಭಿಸಲ್ಪಟ್ಟು, ಇವರೇ ನಿರ್ದೇಶಕರಾಗಿ ನೇಮಕಗೊಂಡರು. ಮುಂದೆ ಪದವಿ ವಿಭಾಗದ ಮುಖ್ಯಸ್ಥರಾಗಿ, ರೀಡರ್ ಆಗಿ ೧೯೯೮ರ ಡಿಸೆಂಬರ್ ೩೧ರಂದು ನಿವೃತ್ತರಾದರು. ಶರಣಬಸವೇಶ್ವರ ಸಂಸ್ಥೆಯ ಕಲಾ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸಿದ ೨೭ ವರ್ಷಗಳ ಅವಧಿಯಲ್ಲಿ ತಮ್ಮ ಪ್ರಾಮಾಣಿಕತೆ, ಕಠಿಣ ಪರಿಶ್ರಮ, ಮತ್ತು ದೂರದೃಷ್ಟಿಯಿಂದ ಈ ವಿಭಾಗವನ್ನು ಉನ್ನತ ಸ್ಥಾನಕ್ಕೇರಿಸಿ ಒಂದು ಶ್ರೇಷ್ಠ ಪರಂಪರೆಯನ್ನು ಹಾಕಿಕೊಟ್ಟರು. ಈ ದೀರ್ಘ ಅವಧಿಯಲ್ಲಿ ಅವರ ಕ್ರಿಯಾತ್ಮಕತೆ ಮತ್ತು ಸೃಜನಶೀಲತೆಯಿಂದ ಅನೇಕ ವಿದ್ಯಾರ್ಥಿಗಳು ಉತ್ತಮ ಕಲಾವಿದರಾಗಿ ರೂಪಗೊಂಡು ಇಂದು ಕಲಾ ಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಈ ಸಾಲಿನಲ್ಲಿ ಶಂಕರ ನಾವಲಬಾ, ವಿ.ಬಿ. ಬಿರಾದಾರ, ವಿ.ಎಸ್. ಪಾಂಚಾಳ, ವಿಜಯರಾವ್ ಕೆ., ಉಮೇಶ ಎಂ. ಮತ್ತು ಶಿವಾನಂದ ಬಂಟನೂರರವರನ್ನು ಹೆಸರಿಸಬಹುದು. ಕಲಾ ಶಾಲೆಗಳನ್ನು ಕಟ್ಟಿ ಬೆಳೆಸುವ ಪರಿಶ್ರಮದಲ್ಲಿಯೂ ಇವರ ಸೃಜನಶೀಲತೆ ಜೀವಂತವಾಗಿದ್ದಿತು. ತಮ್ಮ ನಿರಂತರ ಆಡಳಿತಾತ್ಮಕ ಕೆಲಸಗಳ ನಡುವೆಯೇ ಕಲಾ ಸಾಧನೆಯನ್ನು ಮುಂದುವರೆಯಿಸಿಕೊಂಡು ಹೋಗಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತ ಅನೇಕ ಏಕವ್ಯಕ್ತಿ ಪ್ರದರ್ಶನಗಳನ್ನು ಏರ್ಪಡಿಸುತ್ತ, ಹಲವಾರು ಸಮೂಹ ಪ್ರದರ್ಶನಗಳಲ್ಲಿ ಭಾಗವಹಿಸುತ್ತ ಕಾರ್ಯಶೀಲತೆಯನ್ನು ಕಾಯ್ದುಕೊಂಡು ಬಂದರು. ಅನೇಕ ಪ್ರಶಸ್ತಿ ಪುರಸ್ಕಾರಗಳು ಅವರಿಗೆ ಈ ಅವಧಿಯಲ್ಲಿಯೇ ದೊರಕಿದವು. ೧೯೭೦ರ ದಶಕದಲ್ಲಿ, ಕರ್ನಾಟಕದ ಕಲಾವಿದರನ್ನು ಒಂದೆಡೆ ಸೇರಿಸಿ, ಕಲಾ ಚಟುವಟಿಕೆಗಳನ್ನು ಬಲಪಡಿಸುವ ದೃಷ್ಟಿಯಿಂದ, ಇವರ ಮಿತ್ರರಾದ ಪೀಟರ್ ಲೂಯಿಸ್ ಸ್ಥಾಪಿಸಿದ "ಮೈಸೂರು ಆರ್ಟ್ ಕೌನ್ಸಿಲ್" ಎಂಬ ಸಂಸ್ಥೆಗೆ ಖಂಡೇರಾವರವರು ಕ್ರಿಯಾಶೀಲ ಸದಸ್ಯರಾಗಿದ್ದರು.

ಶೈಲಿ, ವೈವಿಧ್ಯಗಳು

ನಿಸರ್ಗ ದೃಶ್ಯಗಳನ್ನು ಯಥಾವತ್ತಾಗಿ ಚಿತ್ರಿಸುವುದೊಂದೇ ಚಿತ್ರಕಲೆ ಎಂದು ತಿಳಿದಿದ್ದ ಖಂಡೇರಾವ್‌ರವರು ಚಿಕ್ಕ ವಯಸ್ಸಿನಲ್ಲಿ ಕೇವಲ ಭೂದೃಶ್ಯಗಳನ್ನೇ ಚಿತ್ರಿಸುತ್ತಿದ್ದರು. ಮ್ಯಾಗಜೀನ್‌ಗಳಲ್ಲಿ ಬರುತ್ತಿದ್ದ ಮತ್ತು ಕಾಲ್ಪನಿಕವಾಗಿ ತಮಗೆ ತೋಚಿದ್ದನ್ನು ಜಲವರ್ಣ ಮಾಧ್ಯಮಗಳಲ್ಲಿ ಕಾಗದದ ಮೇಲೆ ಮನೆಯಲ್ಲಿಯೇ ಚಿತ್ರಿಸುವುದು ಇವರ ದಿನಚರಿಯಾಗಿದ್ದಿತು. ಕೆಲವು ವರ್ಷಗಳ ನಂತರ, ಇಲ್ಲಿಯ ಕಲಾ ಶಿಕ್ಷಕರಾದ ಶ್ರೀ ಭಂಕೂರಕರ, ಶ್ರೀ ಎಲ್. ಟಿ. ಚವ್ಹಾಣ ಕಲಬುರ್ಗಿಯ ಸುತ್ತಮುತ್ತಲಿನ ಸ್ಥಳಗಳಲ್ಲಿರುವ ಚಿತ್ರಗಳನ್ನು ರಚಿಸುತ್ತಿದ್ದುದನ್ನು

ನೋಡಿದ ಮೇಲೆ ತಾವು ವಿವಿಧ ಸ್ಥಳಗಳಿಗೆ ಹೋಗಿ ತಮ್ಮ ಸ್ವಂತ ಪರಿಶ್ರಮದಿಂದ ಚಿತ್ರ ಬಿಡಿಸಲು ಪ್ರಾರಂಭಿಸಿದರು. ಜೆ.ಜೆ. ಕಲಾಶಾಲೆಯಲ್ಲಿಯ ವ್ಯಾಸಂಗದ ಅವಧಿಯಲ್ಲಿ ಪ್ರಸಿದ್ಧ ಕಲಾವಿದರಾದ ಎಸ್.ಎಸ್. ರಜಾ, ಮಾಧವ ಸಾತೋಲೆಕರ್‌ರವರ ಚಿತ್ರಗಳಿಂದ ಪ್ರಭಾವಿತರಾಗಿ ಹಾಗೂ ಅಲೆಕ್ಸಟೇಲರ್‌ರವರ ಪಾರದರ್ಶಿಕ ವರ್ಣ ವಿಧಾನದಿಂದ ಆಕರ್ಷಿಸಲ್ಪಟ್ಟು ಅದನ್ನೇ ಚಿತ್ರರಚನೆಯಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಿದರು. ೧೯೬೩ರಲ್ಲಿ ಇವರು ಡಿಪ್ಲೊಮಾ ಕೊನೆಯ ವರ್ಷದ ವಿದ್ಯಾರ್ಥಿಯಾಗಿದ್ದಾಗ ರಚಿಸಿದ್ದ "ಮಲಬಾರ ಹಿಲ್ಸ" ನಿಸರ್ಗ ಚಿತ್ರ ಮಹಾರಾಷ್ಟ್ರ ಸರಕಾರದ ರಾಜ್ಯಮಟ್ಟದ ಕಲಾ ಪ್ರದರ್ಶನಕ್ಕಾಗಿ ಆರಿಸಲ್ಪಟ್ಟಿತು. ಇವರ "ಆಫ್ಟರ್ ದಿ ರೇನ್" ಶೀರ್ಷಿಕೆಯ ಜಲವರ್ಣ ಕೃತಿಗೆ ಕರ್ನಾಟಕದ ಲಲಿತ ಕಲಾ ಅಕಾಡೆಮಿಯ ವಾರ್ಷಿಕ ಪ್ರದರ್ಶನದಲ್ಲಿ ಪ್ರಶಸ್ತಿ ಲಭಿಸಿತು. ಮುಂದೆ ಸತತವಾಗಿ ೧೯೬೯ರ ಮತ್ತು ೧೯೭೦ರಲ್ಲಿಯೂ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಪ್ರಶಸ್ತಿಯನ್ನು ಇವರು ಪಡೆದುಕೊಂಡರು.

ಜೆ.ಜೆ. ಕಲಾಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿ, ಕಲಬುರ್ಗಿಗೆ ಮರಳಿ ಬಂದ ನಂತರವೂ ಇವರು ಅಕಾಡೆಮಿಕ್ ಶೈಲಿಯ ಸಂಯೋಜನೆ, ನಿಸರ್ಗ ಮತ್ತು ಭಾವಚಿತ್ರಗಳನ್ನೇ ರಚಿಸುತ್ತಿದ್ದರು. ಹೆಚ್ಚಾಗಿ ಅವರ ಒಲವು ನಿಸರ್ಗದ ಕಡೆಗೆ ಇತ್ತು. ಈ ನಿಸರ್ಗದ ಬಗ್ಗೆ ಅವರಿಗಿದ್ದ ಒಲವನ್ನು ಅವರ ಕಲಾ ಜೀವನದ ಎಲ್ಲ ಹಂತಗಳಲ್ಲಿಯೂ ಕಾಣಬಹುದು. ಈ ಶೈಲಿಯ ಎಲ್ಲ ಒಳ ಹೊರಗುಗಳನ್ನು ಚೆನ್ನಾಗಿ ಅರಿತು, ಆಳಕ್ಕೆ ಇಳಿದು, ಇಲ್ಲಿಯ ಅಮೂಲ್ಯ ದ್ರವ್ಯಗಳನ್ನು ತಮ್ಮದಾಗಿಸಿಕೊಂಡರು. ಹಾಗಾಗಿ ಅನೇಕ ವರ್ಷಗಳ ಸಾಧನೆಯಿಂದ ಜಲವರ್ಣ ಮತ್ತು ತೈಲವರ್ಣ ಮಾಧ್ಯಮದ ನಿಸರ್ಗ ಚಿತ್ರಗಳಲ್ಲಿ ಪ್ರಭುತ್ವ ಮತ್ತು ಸ್ವಂತಿಕೆ ಪಡೆದು ಕಲಾವಲಯಗಳಲ್ಲಿ ತಮ್ಮದೇ ಆದ ಪ್ರತ್ಯೇಕ ಸ್ಥಾನವನ್ನು ಗಳಿಸಿಕೊಂಡರು. ಆ ಸಮಯದಲ್ಲಿ ಇವರು ರಚಿಸಿದ ಕಲಬುರ್ಗಿಯ ಕೋಟೆ, ದರ್ಗಾ ಮತ್ತು ಇನ್ನಿತರ ಸ್ಥಳಗಳ ಅಸಂಖ್ಯಾತ ಚಿತ್ರಗಳು ಇವರ ಸಂಗ್ರಹಾಲಯದಲ್ಲಿ ಕಾಣಲು ಸಿಗುತ್ತವೆ. ಇವರ ಚಿತ್ರಗಳಲ್ಲಿಯ ಕುಂಚದ ಬೀಸುಗಳು (ಸ್ಟ್ರೋಕ್ಸ್), ಅತಿ ಸೌಮ್ಯವಾದ ಬಣ್ಣಗಳ ಬಳಕೆ, ಪಾರದರ್ಶಿಕತೆಯ ಜಲವರ್ಣ ವಿಧಾನ ಇವರಿಗೆ ವಿಶಿಷ್ಟತೆಯನ್ನು ತಂದುಕೊಟ್ಟಿವೆ. ನೀಲವರ್ಣವನ್ನು ಬಳಸಿ ಚಿತ್ರದಲ್ಲಿ ಸೌಮ್ಯತೆಯನ್ನು ತರುವುದೂ ಇವರ ವಿಶೇಷತೆಯಾಗಿದ್ದಿತು. ಯಾವುದೇ ಒಬ್ಬ ಕಲಾವಿದನ ಪ್ರೌಢಿಮೆ ಪ್ರಕಟವಾಗುವುದು ಅವನು ಆರಿಸಿಕೊಂಡ ವಸ್ತು ಮತ್ತು ಅದರ ನಿರ್ವಹಣೆಯಲ್ಲಿ. ಇವರ ಭೂದೃಶ್ಯಗಳಲ್ಲಿ ಗಮನಿಸಬೇಕಾದ ಅತಿ ಮಹತ್ವದ ವಿಶಿಷ್ಟ ಅಂಶವೆಂದರೆ, ಚಿತ್ರಣಕ್ಕಾಗಿ ಆರಿಸಿಕೊಳ್ಳುವ ದೃಶ್ಯದಲ್ಲಿಯ ಭೂಭಾಗ ಮತ್ತು ನಿರ್ವಹಣೆ, ಹಲವಾರು ವಸ್ತುಗಳನ್ನೊಳಗೊಂಡು ದೃಶ್ಯಗಳನ್ನು ಸಂಯೋಜನೆಗೆ ಆರಿಸಿಕೊಳ್ಳುವುದಕ್ಕೆ ಬದಲಾಗಿ, ಕೆಲವೊಂದು ಸಾರಿ ಅತಿ ಸಾಮಾನ್ಯ ವಸ್ತುವನ್ನೇ ಚಿತ್ರಣಕ್ಕೆ ಆರಿಸಿಕೊಂಡು, ಅದರ ಸಂಪೂರ್ಣ ವಿವರಗಳನ್ನು ವೈಭವೀಕರಿಸುತ್ತ ಚಿತ್ರದಲ್ಲಿ ಜೀವಂತಿಕೆಯನ್ನು ತರುವುದು ಇವರ ವಿಶಿಷ್ಟತೆ. ಉದಾಹರಣೆಗೆ ಕೋಟೆಯ ಯಾವುದೇ ಒಂದು ಕಿಟಕಿ, ಜಾಲಂಧರ ಅಥವಾ ನಿಸರ್ಗದಲ್ಲಿಯ ಒಂದು ಮರದ ಭಾಗವನ್ನು ಚಿತ್ರದ ಪ್ರಮುಖ ವಸ್ತುವನ್ನಾಗಿಸಿ ಸಂಯೋಜಿಸುತ್ತಿದ್ದರು. ಆಗಿನ ಹಲವು ಪ್ರಮುಖ ಕಲಾವಿದರ ಅಭಿಪ್ರಾಯದಂತೆ, ಇವರ ಈ ಬಗೆಯ ಕೃತಿಗಳು ಕುತೂಹಲಕಾರಿಯಾಗಿರುತ್ತಿದ್ದವು. ಮತ್ತು ಕಲಾ ವಲಯದಲ್ಲಿ ಬಹುವಾಗಿ ಪ್ರಶಂಸಿಸಲ್ಪಡುತ್ತಿದ್ದವು.

ನಿಸರ್ಗ ಚಿತ್ರಗಳನ್ನು ಚಿತ್ರಿಸುವ ಜೊತೆಗೆ ಇವರು ಮಾನವಾಕೃತಿಯ ಸಂಯೋಜನಾ ಚಿತ್ರಗಳನ್ನು ರಚಿಸುವಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಪ್ರಾರಂಭದ ದಿನಗಳಲ್ಲಿ ಖ್ಯಾತ ಕಲಾವಿದರಾದ ಎನ್.ಎಸ್. ಬೇಂದ್ರೆಯವರ ಸಂಯೋಜನಾ ಶೈಲಿಯಿಂದ ಪ್ರಭಾವಿತರಾಗಿದ್ದ ಇವರು ಈ ಪ್ರಕಾರದಲ್ಲಿಯೂ ತಮ್ಮತನವನ್ನು ಕಂಡುಕೊಂಡರು. ಅತಿ ಕಡಿಮೆ ರೇಖೆಗಳಿಂದ, ಸೌಮ್ಯವರ್ಣಗಳನ್ನು ಬಳಸಿಕೊಂಡು, ಭಾವನಾತ್ಮಕವಾದ ಮಾನವಾಕೃತಿಗಳನ್ನು ರಚಿಸುವುದು ಇವರ ವಿಶೇಷತೆ. ಸಾಮಾಜಿಕ ಕಳಕಳಿಯ, ಗ್ರಾಮಜೀವನಕ್ಕೆ ಸಂಬಂಧಿಸಿದ ಹಾಗೂ ಮಹಿಳೆಯ ದಿನನಿತ್ಯ ಬದುಕಿನ

ವಿಷಯಗಳು ಇವರ ಕಲಾಕೃತಿಯ ವಸ್ತುವಾಗಿವೆ. ನೇರ ರೇಖೆಗಳನ್ನು ಹೆಚ್ಚಾಗಿ ಬಳಸಿ, ಅತಿ ಕಡಿಮೆ ವಿವರಗಳಿಂದ ಚಿತ್ರಗಳನ್ನು ಸಂಯೋಜಿಸುವುದು ಇವರ ವಿಶಿಷ್ಟತೆ. ೧೯೮೨ರಲ್ಲಿ ಹೈದರಾಬಾದಿನಲ್ಲಿ ನಡೆದ ಇವರ ಏಕವ್ಯಕ್ತಿ ಪ್ರದರ್ಶನದಲ್ಲಿ ಈ ಸರಣಿಯ ಕೃತಿಗಳು ಪ್ರದರ್ಶಿಸಲ್ಪಟ್ಟು ಕಲಾಭಿಮಾನಿಗಳಿಂದ ಪ್ರಶಂಸಿಸಲ್ಪಟ್ಟವು. ಆಗ ರಚಿಸಿದ 'ರಿಟರ್ನ್ ಟು ಪೆವಿಲಿಯನ್' ಎಂಬ ಶೀರ್ಷಿಕೆಯ ಚಿತ್ರ ಕರ್ನಾಟಕ ಲಲಿತಕಲಾ ಅಕಾಡೆಮಿಯ ವಾರ್ಷಿಕ ಪ್ರದರ್ಶನದಲ್ಲಿ ಪ್ರದರ್ಶಿಸಲ್ಪಟ್ಟು ಬೆಂಗಳೂರಿನ 'ರಾಮನ್ ರೀಸರ್ಚ್ ಇನ್ಸ್ಟಿಟ್ಯೂಟ್' ನಿಂದ ಖರೀದಿಸಲ್ಪಟ್ಟಿತು.

ಹಲವಾರು ವರ್ಷಗಳ ಕಾಲ ಅಕಾಡೆಮಿಕ್ ಶೈಲಿಯಲ್ಲಿ ಒಂದೇ ಬಗೆಯ ಕೃತಿ ರಚನೆ ಮಾಡುತ್ತಾ ಹೋದುದರಿಂದ ಇವರ ಚಿತ್ರಗಳಲ್ಲಿ ಕ್ಲೀಷೆ ಎನಿಸುವಷ್ಟು ಏಕತಾನತೆ ಮೂಡಿ ಕಲಾ ವಲಯದಲ್ಲಿ ಇವರ ಸೃಜನಶೀಲತೆಯ ಬಗ್ಗೆಯೇ ಸಂಶಯಪಡುವಂತಾಯಿತು. ಇವರಲ್ಲಿ ಕ್ರಿಯೇಟಿವ್ ಅಂಶಗಳೇ ಇಲ್ಲವೇ ಎಂದು ಸಹ ಕಲಾವಿದರು ಆಡಿಕೊಳ್ಳುತ್ತಿದ್ದುದು ಇವರ ಗಮನಕ್ಕೆ ಬಂದು, ಬದಲಾವಣೆಯ ಕಡೆಗೆ ದೃಷ್ಟಿ ಹರಿಸುವಂತಾಯಿತು. ನಿಸರ್ಗ ಚಿತ್ರ ರಚನೆಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತ ಕ್ರಿಯೇಟಿವ್ ಶೈಲಿಯಲ್ಲಿ ಭೂದೃಶ್ಯಗಳನ್ನು ರಚಿಸಲಿಕ್ಕೆ ಪ್ರಾರಂಭಿಸಿದರು. ೧೯೮೦ರಲ್ಲಿ ರಚಿಸಿದ "ಬ್ರೋಕನ್ ಗ್ಲಾಸ್" ಎಂಬ ಕ್ರಿಯೇಟಿವ್ ಚಿತ್ರಕ್ಕೆ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ದೊರಕಿತು. ೧೯೮೫ರಲ್ಲಿ ರಚಿಸಿದ "ಪ್ರವಾಹ"ವೆಂಬ ನಿಸರ್ಗ ಚಿತ್ರ ಎನ್.ಎಸ್. ಬೇಂದ್ರೆಯವರು ಜ್ಯೂರಿಯಾಗಿದ್ದ ಆ ವರ್ಷದ ರಾಷ್ಟ್ರೀಯ ಲಲಿತಕಲಾ ಅಕಾಡೆಮಿಯ ಪ್ರದರ್ಶನಕ್ಕೆ ಆಯ್ಕೆಯಾಯಿತು. ತೈಲ ಮಾಧ್ಯಮದಲ್ಲಿ ರಚಿಸಿದ ಈ ಕೃತಿಯಲ್ಲಿ ಪ್ರವಾಹದ ದೃಶ್ಯವನ್ನು ವೈಮಾನಿಕವಾಗಿ ವೀಕ್ಷಿಸಿದಂತೆ ಚಿತ್ರಿಸಲಾಗಿತ್ತು. ಅಮೂರ್ತ ಚಿತ್ರದಂತೆ ಭಾಸವಾಗುತ್ತಿದ್ದ ಈ ಚಿತ್ರದಲ್ಲಿ ರಭಸದಿಂದ ಮೂಡಿಸಿದ ಕುಂಚದ ಬೀಸುಗಳು, ಪ್ರಾಧಾನ್ಯತೆ ಪಡೆದಿದ್ದವು. ಈ ಚಿತ್ರವು ಕೇಂದ್ರೀಯ ಲಲಿತಕಲಾ ಅಕಾಡೆಮಿಯಿಂದ ಖರೀದಿಸಲ್ಪಟ್ಟಿತು ಕೂಡ. ಇವರ ಇದೇ ಬಗೆಯ ಕೃತಿಗಳು ಸತತವಾಗಿ ೪-೫ ಸಲ ಕೇಂದ್ರ ಲಲಿತಕಲಾ ಅಕಾಡೆಮಿ ವಾರ್ಷಿಕ ಕಲಾ ಪ್ರದರ್ಶನದಲ್ಲಿ ಆಯ್ಕೆಗೊಂಡವು.

೧೯೮೫ರ ವರ್ಷ ಇವರ ಕಲಾ ಜೀವನದ ಮಹತ್ವವಾದ ಘಟ್ಟವೆಂದೇ ಪರಿಗಣಿಸಬಹುದು. ಆ ವರ್ಷ ಬೆಂಗಳೂರಿನಲ್ಲಿ ಸಾರ್ಕ್ ಸಮ್ಮೇಳನ ಜರುಗಿತು. ಈ ಸಂದರ್ಭದಲ್ಲಿ ರಾಜ್ಯ ಸರಕಾರ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಇದರ ಅಂಗವಾಗಿ ಕೆ.ಕೆ.ಹೆಬ್ಬಾರರ ನಿರ್ದೇಶನದಲ್ಲಿ ನಾಡಿನ ಹಲವು ಪ್ರಸಿದ್ಧ ಕಲಾವಿದರನ್ನೊಳಗೊಂಡ ಒಂದು ಕಲಾ ಶಿಬಿರವನ್ನು ಏರ್ಪಡಿಸಿತ್ತು. ಶಿಬಿರಾರ್ಥಿಯಾದ ಖಂಡೇರಾವರವರು ತೈಲಮಾಧ್ಯಮದಲ್ಲಿ ಅಮೂರ್ತ ಕೃತಿಯೊಂದನ್ನು ರಚಿಸಿದರು. ಜಾಮಿತಿಯ ಆಕೃತಿಗಳನ್ನು ಪಾರದರ್ಶಿಕೆಯ ವರ್ಣವಿಧಾನದಿಂದ ರಚಿಸಿದ ಈ ಕೃತಿ ಹೆಬ್ಬಾರರ ಗಮನ ಸೆಳೆಯಿತು. ಚಿತ್ರವನ್ನು ಬಹುವಾಗಿ ಮೆಚ್ಚಿಕೊಂಡ ಹೆಬ್ಬಾರರು ಖಂಡೇರಾವರೊಂದಿಗೆ ಆತ್ಮೀಯವಾಗಿ ಚರ್ಚಿಸಿ ಇದೇ ಶೈಲಿಯನ್ನು ಮುಂದುವರೆಸಿಕೊಂಡು ಹೋಗಿ ಹೆಚ್ಚಿನ ಸಾಧನೆ ಮಾಡಲು ಸಲಹೆ ನೀಡಿದರು. ತಮ್ಮ ಬದಲಾದ ತಂತ್ರ ಮತ್ತು ಶೈಲಿಯ ಬಗ್ಗೆ ಅಳುಕಿನಲ್ಲಿಯೇ ಇದ್ದ ಖಂಡೇರಾವರಲ್ಲಿ ಈ ಹಿರಿಯ ಕಲಾವಿದರ ಪ್ರಶಂಸೆಯ ನುಡಿಗಳು ಆತ್ಮವಿಶ್ವಾಸವನ್ನು ತುಂಬಿದ್ದವು.

ಅಲ್ಲಿಯವರೆಗೆ ನವ್ಯಕಲೆಯನ್ನು ಉದಾಸೀನತೆಯಿಂದಲೇ ಕಾಣುತ್ತಿದ್ದ ಇವರ ದೃಷ್ಟಿಕೋನ ಬದಲಾಗಿ, ಸಮಕಾಲೀನ ಬೆಳವಣಿಗೆಯತ್ತ ಮನಸ್ಸು ತೆರೆದುಕೊಂಡಿತು. ಕಲಾ ಕ್ಷೇತ್ರದಲ್ಲಿ ಆಗುತ್ತಿದ್ದ ಕ್ಷಿಪ್ರಗತಿಯ ಬದಲಾವಣೆಗಳನ್ನು ಹೊಸ ಹೊಸ ಪ್ರಯೋಗಗಳನ್ನು ತಿಳಿಯಲು ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡರು. ತಮ್ಮ ಅರಿವನ್ನು ಹೆಚ್ಚಿಸಿಕೊಳ್ಳಲು 3ನೇ ಅಂತರರಾಷ್ಟ್ರೀಯ "ಟ್ರಿನಾಲೆ" ಪ್ರದರ್ಶನವನ್ನು ಸಹ ವೀಕ್ಷಿಸಿ ಜಾಗತಿಕ ಮಟ್ಟದಲ್ಲಿ ಆದ ಹೊಸ ಅನ್ವೇಷಣೆಗಳನ್ನು ಕಲಾರಚನೆಯಲ್ಲಿಯ ಹೊಸ ಹೊಸ ತಂತ್ರಗಳನ್ನು ಅಭ್ಯಸಿಸಿದರು. ಈ ಆಳವಾದ

ಅಭ್ಯಾಸದಿಂದ ನವ್ಯಕಲೆಯ ಬಗ್ಗೆ ಅಥೆಂಟಿಕ್ ಆಗಿ ಮಾತಾಡುವದು, ಅಭಿಪ್ರಾಯವನ್ನು ವ್ಯಕ್ತಪಡಿಸುವದು ಸಾಧ್ಯವಾಯಿತು. ಈ ಅಮೂರ್ತ ಶೈಲಿಯನ್ನೇ ಅವರು ಮುಂದುವರೆಸಿಕೊಂಡು ಹೋಗಿ ತಂತ್ರ ಮತ್ತು ವರ್ಣಗಳ ಬಳಕೆಯಲ್ಲಿ ಪ್ರಯೋಗಗಳನ್ನು ಮಾಡುತ್ತ ೧೯೮೮ರಿಂದ ೧೯೯೧ರ ಅವಧಿಯಲ್ಲಿ “ವಿಂಡೊ” ಚಿತ್ರ ಸರಣಿಗಳನ್ನು ರಚಿಸಿದರು. ಕಿಟಕಿಗಳ ಗಾಜಿನ ಮೇಲೆ ಬೆಳಕು ಪ್ರತಿಫಲಿಸಿದಾಗ ಆಗುವ ಪರಿಣಾಮಗಳನ್ನು ತಮ್ಮ ವಿಶೇಷ ಶೈಲಿಯಿಂದ ರಚಿಸಿದರು.

ಸಮಕಾಲೀನ ಪರಂಪರೆಗೆ ಸೇರಿದ ಈ ಕೃತಿಗಳಲ್ಲಿಯೂ ಅವರ ಹಳೆಯ ಅಕಾಡೆಮಿಕ್ ಪ್ರಕಾರದಲ್ಲಿಯ ಪ್ರಮುಖ ಅಂಶಗಳಾದ ಶುದ್ಧ ವರ್ಣಮೇಳ, ಲಯಬದ್ಧತೆ ಕಾಣಬಹುದು. ವಿಭಿನ್ನ ಆಕಾರದ ಹೆಚ್ಚಾಗಿ ಚೌಕಾಕಾರದ ಜಾಮಿತಿಯ ಆಕೃತಿಗಳನ್ನು ನಿರ್ಮಿಸುತ್ತ ಕ್ಯಾನವಾಸಿನ ಬಿಳಿಯ ಭಾಗವನ್ನೇ ವಿಂಗಡಿಸಿ ರೇಖೆಯಂತೆ ಉಪಯೋಗಿಸಿಕೊಳ್ಳುವುದು ಇವರ ವಿಶೇಷತೆ. ಇವರ ಚಿತ್ರಗಳಲ್ಲಿ ಪಾರದರ್ಶಿಕೆಯಲ್ಲಿ ಮಾನೋಕ್ರೊಮೆಟಿಕ್ ವರ್ಣಗಳ ವಿನ್ಯಾಸವನ್ನು ಪ್ರಭಾವಶಾಲಿಯಾಗಿ ಕಾಣುತ್ತೇವೆ.

ನಿಸರ್ಗ ಮತ್ತು ಸಂಯೋಜನಾ ಚಿತ್ರಗಳಂತೆ ಭಾವಚಿತ್ರ ರಚಿಸುವಲ್ಲಿಯೂ ಇವರು ಸಿದ್ಧಹಸ್ತರು. ಈ ವಿಷಯದತ್ತ ಇವರ ವಿಶೇಷ ಒಲವು ವಿದ್ಯಾರ್ಥಿ ದಿಶೆಯಿಂದಲೇ ಪ್ರಾರಂಭಗೊಂಡು ಇನ್ನೂ ಉಳಿದುಕೊಂಡು ಬಂದಿದೆ. ಅಕಾಡೆಮಿಕ್ ಶೈಲಿಯ ಭಾವಚಿತ್ರ ರಚನೆ ಕ್ರಮೇಣವಾಗಿ ಕಲಾ ಕ್ಷೇತ್ರದಿಂದ ಕಣ್ಮರೆಯಾಗುತ್ತಿರುವಾಗ ಅದನ್ನು ಜೀವಂತವಾಗಿಟ್ಟು, ಆದರೆ ತನ್ನದೇ ಆದ ಮಹತ್ವವನ್ನು ಕಲಾರಂಗಕ್ಕೆ ಮನವರಿಕೆ ಮಾಡಿಕೊಡುವ ಕೆಲವೇ ಕಲಾವಿದರಲ್ಲಿ ಖಂಡೇರಾವರವರು ಪ್ರಮುಖರೆಂದೇ ಪರಿಗಣಿಸಲ್ಪಡುತ್ತಾರೆ. ಈ ಬಗೆಯ ಚಿತ್ರರಚನೆಯಲ್ಲಿ ಇವರ ವರ್ಣಪ್ರಜ್ಞೆ ವಿಶಿಷ್ಟವಾದುದು. ಅನೇಕ ವರ್ಣಗಳನ್ನು ಉಪಯೋಗಿಸಿ ಅತಿ ಕಡಿಮೆ ಬಣ್ಣಗಳನ್ನು ಬಳಸಿದಂತೆ ಭಾಸವಾಗುವಂತೆ ಮಾಡಿ, ಭಾವಚಿತ್ರದಲ್ಲಿ ಮೈ ಬಣ್ಣದ ಪರಿಣಾಮ ತರುವುದು ಇವರ ವಿಶೇಷತೆ. ಇತರ ಕಲಾವಿದರಂತೆ ಕಪ್ಪು ಮತ್ತು ಬರ್ನ್ಟ್‌ಸಿಯಾನ್ನುಗಳನ್ನು ಬಳಸದೆ ಇತರ ವರ್ಣಗಳಿಂದ.. ತಂಪು... ಆ ವರ್ಣದ ಪರಿಣಾಮವನ್ನು ಕೃತಿಯಲ್ಲಿ ತರುವುದೂ, ದಪ್ಪನಾಗಿ ಬಣ್ಣಗಳನ್ನು ಮತ್ತೆ ಬೆಳಕಿನ ಪ್ರಭಾವ ಮೂಡುವಂತೆ ಮಾಡುವುದೂ ಇವರ ಶೈಲಿಯ ಮತ್ತೊಂದು ವಿಶೇಷತೆ. ಕೇವಲ ರೂಪದರ್ಶಿಯ ಹೋಲಿಕೆಗಷ್ಟೆ ಸೀಮಿತವಾಗದೆ ಅವರ ಭಾವಚಿತ್ರಗಳು ವ್ಯಕ್ತಿತ್ವದ ಆಳಕ್ಕಿಳಿದು ಭಾವನೆಗಳನ್ನು ಹೊರಹೊಮ್ಮಿಸುತ್ತವೆ. ಭಾವಚಿತ್ರಗಳಲ್ಲಿ ಬಿರುಸು ಬೀಸುಗಳು ಪ್ರಧಾನವಾಗಿದ್ದರೂ, ಕೃತಿಗಳು ರಮ್ಯತೆ ಮತ್ತು ಲಾಲಿತ್ಯವನ್ನು ಹೊರಸೂಸುತ್ತವೆ. ಯಾವುದೇ ಒಬ್ಬ ಪ್ರಸಿದ್ಧ ಸಂಗೀತಗಾರನಿಂದ ಒಂದು ನಿರ್ದಿಷ್ಟವಾದ ಗಾಯನವನ್ನು ನಿರೀಕ್ಷಿಸುವ ಪ್ರೇಕ್ಷಕರಂತೆ, ಖಂಡೇರಾವರು ನಡೆಸುವ ಪ್ರತಿಯೊಂದು ಪ್ರಾತ್ಯಕ್ಷಿಕೆಯಲ್ಲಿಯೂ ಕಲಾ ವಿದ್ಯಾರ್ಥಿಗಳು, ಕಲಾವಿದರು ಮತ್ತು ವೀಕ್ಷಕರು ಇವರು ಭಾವಚಿತ್ರ ರಚಿಸುವುದನ್ನೇ ಇಷ್ಟಪಡುತ್ತಾರೆ. ಅತಿ ಕುತೂಹಲದಿಂದ ಚಿತ್ರ ರಚನೆಯನ್ನು ವೀಕ್ಷಿಸುತ್ತಿರುವ ಜನದಟ್ಟಣೆಯ ಮಧ್ಯದಲ್ಲಿ ಅತ್ಯಂತ ವೇಗವಾಗಿ ಅತ್ಯಲ್ಪ ಸಮಯದಲ್ಲಿಯೇ ಭಾವಚಿತ್ರ ರಚಿಸಿ, ವೀಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸುವುದು ಖಂಡೇರಾವರ ಹೆಗ್ಗಳಿಕೆ. ಸುಮಾರು ಎರಡೂವರೆ ದಶಕಗಳಿಂದ ನವ್ಯ ಕಲೆಯತ್ತ ಒಲಿದು ಅಮೂರ್ತ ಶೈಲಿಯಲ್ಲಿ ಚಿತ್ರ ರಚಿಸುತ್ತಿದ್ದರೂ ಅಕಾಡೆಮಿಕ್ ಶೈಲಿಯ ಭಾವಚಿತ್ರ ರಚಿಸುವುದನ್ನು ಮುಂದುವರೆಸಿಕೊಂಡು ಒಂದು ಆ ಹಳೆಯ ತಲೆಮಾರಿನ ಗೌರವಾನ್ವಿತ ಪ್ರತಿನಿಧಿಯಾಗಿದ್ದಾರೆ.

ನಿವೃತ್ತಿ ಜೀವನವೆಂದರೆ ಕೆಲವರಿಗೆ ದುಃಸ್ವಪ್ನ. ಕೆಲವರಿಗೆ ಇದು ಜೀವನದ ಮುಗಿದ ಅಧ್ಯಾಯ. ಆದರೆ ಸೃಜನಶೀಲತೆಗೆ ಇದು ಜೀವನದ ಮಹತ್ವದ ಘಟ್ಟ. ಬಹುದಿನದ ಕನಸುಗಳು ಸಾಕಾರಗೊಳ್ಳುವ ವಿಶಿಷ್ಟ ಅವಧಿ. ಜೀವನವನ್ನು ಪರಿಪೂರ್ಣದೆಡೆಗೆ ಕೊಂಡೊಯ್ಯುವ ಸುಸಮಯ. ಈ ಸಮಯಕ್ಕೆ ಕಾಯುತ್ತಿರುವಂತೆ, ಖಂಡೇರಾವರು ಅನೇಕ

ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಕಲಾ ವ್ಯಾಸಂಗಕ್ಕೆ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಅನೇಕ ಪುಸ್ತಕಗಳನ್ನು ಹೊರತರಲು ಹಾಗೂ ಕಲಾಸಕ್ತರ ಜ್ಞಾನಾರ್ಜನೆಗೆ ಉಪಯುಕ್ತವಾಗುವ "ವರ್ಣಸಿದ್ಧಾಂತ" ವೆಂಬ ಕೃತಿಯನ್ನು ಬರೆದು ಪ್ರಕಟಿಸುವ ಸಿದ್ಧತೆಯಲ್ಲಿದ್ದಾರೆ.

ಆಳವಾದ ಜೀವನಾನುಭವದಿಂದ ಪಕ್ವವಾದ ಖಂಡೇರಾವರಿಂದ ಕಲಬುರ್ಗಿ ವಿಭಾಗದ ಕಲಾಕ್ಷೇತ್ರ ಇನ್ನಷ್ಟು ಶ್ರೀಮಂತವಾಗುವುದರಲ್ಲಿ ಸಂದೇಹವಿಲ್ಲ.

ಸಾಂಸಾರಿಕ ಬದುಕು

ಕಲಾವಿದ ಖಂಡೇರಾವರದು ಸುಶಿಕ್ಷಿತವಾದ ಸುಸಂಸ್ಕೃತ ಕುಟುಂಬ. ಸರಳ ನಿರಾಡಂಬರ ವ್ಯಕ್ತಿತ್ವದ ಇವರ ಶ್ರೀಮತಿಯವರು ಕಲೆಯ ಬಗ್ಗೆ ಜ್ಞಾನ ಹೊಂದದೇ ಇದ್ದರೂ, ಕಲಾವಿದ ಪತಿಯ ಇಷ್ಟಾನಿಷ್ಟಗಳನ್ನು ಅರಿತು ಸಾಧನೆಯ ಹಾದಿಯಲ್ಲಿ ಸಹಕಾರಿಯಾಗಿ ನಿಂತು, ಕಲಾವಿದರ ಅಭ್ಯುದಯವನ್ನು ಕಂಡು ಹೆಮ್ಮೆ ಪಡುವವರು. ಹಿರಿಯ ಮಗ ಬಸವರಾಜ ಖಂಡೇರಾವರು, ವಾಸ್ತುಶಿಲ್ಪ ಪದವೀಧರರಾಗಿದ್ದು ಕಲಬುರ್ಗಿಯಲ್ಲಿಯೇ 'ಆಕೃತಿ' ಎಂಬ ಹೆಸರಿನ ಸ್ವಂತ ಸಂಸ್ಥೆಯನ್ನು ಹೊಂದಿ ಅನೇಕ ಪ್ರಮುಖ ಕಟ್ಟಡಗಳ ವಿನ್ಯಾಸಕಾರರಾಗಿ ಈ ಭಾಗದಲ್ಲಿ ಸಾಕಷ್ಟು ಹೆಸರು ಪಡೆದಿರುವರು. ಹಿರಿಯ ಮಗಳು ಗಂಗಾಂಬಿಕಾ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದು ವಿವಾಹವಾಗಿ ಮುಂಬಯಿಯಲ್ಲಿ ನೆಲೆಸಿರುವರು. ಕೊನೆಯ ಮಗಳು ಬಸ್ಸಮ್ಮ ಕೊನೆಯ ವರ್ಷ ಇಂಜನಿಯರಿಂಗ್ ವಿದ್ಯಾರ್ಥಿನಿ.

ಕುಟುಂಬದ ಸದಸ್ಯರೊಡನೆ ಸ್ನೇಹಮಯವಾಗಿ ಬೆರೆತು ಸರಳ ಜೀವನದಲ್ಲಿಯೇ ಸಂತೃಪ್ತಿಯನ್ನು ಕಂಡಿರುವ ಖಂಡೇರಾವರದು ಆದರ್ಶ ಕುಟುಂಬ.

◆◆◆



'ಭೂದೃಶ್ಯ' ಮಾಧ್ಯಮ: ತೈಲವರ್ಣ "Landscape" Medium oil



'ಭಾವಚಿತ್ರ' ಮಾಧ್ಯಮ: ತೈಲವರ್ಣ "Portrait", Medium: Oil



'ವಿಂಡೊ ಶ್ರೇಣಿ' ಮಾಧ್ಯಮ: ತೈಲವರ್ಣ "Window Series" *Medium: Oil Colour*



'ವಿಂಡೊ ಶ್ರೇಣಿ' ಮಾಧ್ಯಮ: ತೈಲವರ್ಣ "Window Series" *Medium: Oil Colour*



"ಭೂದೃಶ್ಯ" ಮಾಧ್ಯಮ: ಜಲವರ್ಣ " Landscape" *Medium: Oil Colour*



"ಕಲ್ಬುರ್ಗಿಯ ಹಳೆಯ ಜೇಲು" ಮಾಧ್ಯಮ: ಜಲವರ್ಣ " Gulbarga old jail" *Medium: Water Colour*



"ಹಳ್ಳಿಯ ಓಣಿ" ಮಾಧ್ಯಮ: ಜಲವರ್ಣ " Village street" *Medium: Water Colour*



"ಭೂದೃಶ್ಯ" ಮಾಧ್ಯಮ: ಜಲವರ್ಣ " Landscape " *Medium: Water Colour*



"ಭೂದೃಶ್ಯ" ಮಾಧ್ಯಮ: ಜಲವರ್ಣ
" Landscape" *Medium: Water Colour*




"ಪಟ್ಟದಕಲ್ಲು ಭೂದೃಶ್ಯ" ಮಾಧ್ಯಮ: ಜಲವರ್ಣ
" Landscape, Pattadakallu" *Medium: Oil Colour*



"ಸಂಯೋಜನೆ" ಮಾಧ್ಯಮ: ತೈಲವರ್ಣ
"Composition" *Medium: Oil Colour*



"ಪಟ್ಟದಕಲ್ಲು, ಭೂದೃಶ್ಯ" ಮಾಧ್ಯಮ: ಜಲವರ್ಣ
"Landscape, Pattadakallu" *Medium: Oil Colour*



"ಭಾವಚಿತ್ರ" ಮಾಧ್ಯಮ: ತೈಲವರ್ಣ
"Portrait" *Medium: Oil Colour*



"ವಿದ್ಯಾರ್ಥಿನಿಯ ಭಾವಚಿತ್ರ" ಮಾಧ್ಯಮ: ಜಲವರ್ಣ
"Student Portrait" *Medium: Oil Colour*



"ಸ್ಥಿರಚಿತ್ರ" ಮಾಧ್ಯಮ: ಜಲವರ್ಣ
"Still Life" *Medium: Water Colour*



"ಸ್ಥಿರಚಿತ್ರ" ಮಾಧ್ಯಮ: ಜಲವರ್ಣ
"Still Life" *Medium: Water Colour*



"ಸಂಯೋಜನೆ" ಮಾಧ್ಯಮ: ತೈಲವರ್ಣ
"Composition" *Medium: Oil Colour*



"ವಿಂಡೊ ಶ್ರೇಣಿ" ಮಾಧ್ಯಮ: ತೈಲವರ್ಣ
"Window Series" *Medium: Oil Colour*

PRESIDENT'S NOTE

The Karnataka Lalithakala Academy has undertaken various projects for the progress of Art and Artists. Publication of books is an important programme in this project. The Academy has brought out books on many senior and contemporary artists. These books acquaint the public with the Art and Artists. They also describe the activities of the Academy.

I have great pleasure to present this book about Shri. Khanderao in the series of the contemporary artists. Sri. Khande Rao is my Art Teacher and source of my inspiration. I consider it my good fortune that this book is being published when I am the President of the Academy.

The credit and reputation of starting an Art School and shaping many artists during the sixtees when the field of Art was sterile and devoid of any artistic activities in Gulbarga division goes to Sri. Khanderao.

He was deeply engaged in his lecturership and the management of the Department of Drawing and Painting. Inspite of this busy schedule, he was actively engaged in artistic endeavours and he is now a respected contemporary artist of national reputaion.

He has established his unique individual stamp in nature and portrait paintings and conducted a series of exhibitions. He has acquired a total command over the medium of his choice.

Sri. Kuppanna Kandagal himself an artist, who is closely acquainted with the life, thoughts of Sri. Khanderao has written this book and Sri. Shridher Rao has translated it into English. I thank both of them on behalf of the Academy and myself for their favour.

Dr. H. Chandrashekhar, a member of the Academy has scrutinised the proofs and looked after printing of the book. M/s. Mayur Print-Ads have printed the book in an elegant way. I thank the printer. I hope that art lovers too will warmly welcome this book.

ANDANI V.G.
President

J.S. KHANDERAO

